RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳುವವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೆಂಟ್ಸ್ ಸ್ಪೆಷಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ಬರ ಪರಿಸ್ಥಿತಿ ಸಮರ್ಥವಾಗಿ ನಿಭಾಯಿಸಿ: ಡಾ.ಎಂ.ವಿ. ವೆಂಕಟೇಶ್ » 2

ನಾಪತ್ತೆಯಾಗಿದ್ದ ಗದಗ ಕೆಆರ್‌ಐಡಿಎಲ್ ಎಇಇ ಪರ್ವೇಜ್ ಭೋಪಾಲ್ ರೈಲ್ವೆ ನಿಲ್ದಾಣದಲ್ಲಿ ಪತ್ತೆ » 3

ಆಸ್ಪತ್ರೆ ಹಾಗೂ ಕ್ಯಾಂಟಿನ್‌ಗೆ ಜಿಲ್ಲಾಧಿಕಾರಿ ಭೇಟಿ, ಸ್ವಚ್ಛತೆಗೆ ಆದ್ಯತೆ ನೀಡಿ » 4

ಸಂಪುಟ(Volume): 1 ಸಂಚಿಕೆ (Issue): 80 ● ಪುಟ (Page): 4 ● ದರ: Rs. 4 ಗುರುವಾರ 1 ಅಕ್ಟೋಬರ್ 2026 ● 1 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ಪ್ರಜಾಪ್ರಭುತ್ವ ಉಳಿಸಿ ನಡಿಗೆ ಘೋಷಣೆ

## ಇಂಡಿಯಾ ಮೈತ್ರಿಕೂಟದ ಸಭೆ । ಮೋದಿ, ಅಮಿತ್ ಶಾ, ಜ್ಞಾನೇಶ ರಾಜೀನಾಮೆಗೆ ಆಗ್ರಹ

**ದೆಹಲಿ:** ಸಾಂಸ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವ ಚುನಾವಣಾ ಆಯೋಗ ಈಗ ಪ್ರತಿಪಕ್ಷಗಳ ಇಂಡಿಯಾ ಮೈತ್ರಿಕೂಟದ ಭಾರೀ ವಿರೋಧವನ್ನು ಎದುರಿಸಲಿದೆ. ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಇಂದು (ಸೆ.30–ಬುಧವಾರ) ನಡೆದ ಇಂಡಿಯಾ ಮೈತ್ರಿಕೂಟದ ಸಭೆಯಲ್ಲಿ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮವನ್ನು ವಿರೋಧಿಸಿ, ದೇಶಾದ್ಯಂತ "ಪ್ರಜಾಪ್ರಭುತ್ವ ಉಳಿಸಿ ನಡಿಗೆ"ಯನ್ನು ಘೋಷಣೆ ಮಾಡಲಾಗಿದೆ.

ಚುನಾವಣಾ ಆಯೋಗದ ಮೇಲೆ ಸರ್ಕಾರದ ನಿಯಂತ್ರಣವಿದೆ ಎಂದು ಆರೋಪಿಸಿರುವ ಇಂಡಿಯಾ ಮೈತ್ರಿಕೂಟ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಹೋರಾಟ ನಡೆಸುವುದಾಗಿ ಹೇಳಿದೆ. ಪ್ರಜಾಪ್ರಭುತ್ವದ ರಕ್ಷಣೆಯೇ ತಮ್ಮ ಗುರಿ ಎಂದು ಮೈತ್ರಿಕೂಟದ ನಾಯಕರು ಹೇಳಿದ್ದಾರೆ.

ಸಭೆಯಲ್ಲಿ ಒಟ್ಟು ಆರು ನಿರ್ಣಯಗಳಿಗೆ ಸರ್ವಾನುಮತದ ಅಂಗೀಕಾರ ದೊರೆತಿದ್ದು, ಅವುಗಳ ಆಧಾರದ ಮೇಲೆಯೇ ಪ್ರಜಾಪ್ರಭುತ್ವ ಉಳಿಸಿ ನಡಿಗೆ ಹೋರಾಟ ಆರಂಭಿಸುವುದಾಗಿ ಇಂಡಿಯಾ ಮೈತ್ರಿಕೂಟ ಸ್ಪಷ್ಟಪಡಿಸಿದೆ. ಸಭೆಯ ಬಳಿಕ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಸಭೆಯಲ್ಲಿ ಕೈಗೊಂಡ ಆರು ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದರು. ಇಂಡಿಯಾ ಮೈತ್ರಿಕೂಟದ ನಾಯಕರು ಸಭೆ ಸೇರಿ ಈ ಕೆಳಗಿನ ಆರು ಅಂಶಗಳ ಬಗ್ಗೆ ಒಪ್ಪಿಕೊಂಡರು.

**ರಾಹುಲ್ ಗಾಂಧಿ ರೋಷಾಗ್ನಿ:** ಸಭೆಯ ಬಳಿಕ ಂಆಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. "ಈ ಮೂವರೂ ಸೇರಿ ಪ್ರಜಾಪ್ರಭುತ್ವದ ಮೇಲೆ ಸವಾರಿ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವಕ್ಕಿಂತ ಯಾರೂ ದೊಡ್ಡವರಲ್ಲ ಎಂಬ ಸತ್ಯವನ್ನು ನಾವು ಇವರಿಗೆ ತೋರಿಸಿ ಕೊಡುತ್ತೇವೆ. ಎಸ್‌ಐಆರ್ ಎಂಬ ಅಕ್ರಮದ ಮೂಲಕ ಲೋಕತಂತ್ರಕ್ಕೆ ಪೆಟ್ಟು ನೀಡಿರುವ ಈ ಮೂವರಿಗೆ, ಶಿಕ್ಷೆ ಕೊಡಿಸುವುದೇ ನಮ್ಮ ಗುರಿ" ಎಂದು ರಾಹುಲ್ ಗಾಂಧಿ ಗುಡುಗಿದರು.



### ಆರು ನಿರ್ಣಯ ಮಂಡನೆ

1. ಅಕ್ಟೋಬರ್ 2ರಿಂದ 8ರವರೆಗೆ, ಜಿಲ್ಲಾ ಮಟ್ಟದ "ಪ್ರಜಾಪ್ರಭುತ್ವ ಉಳಿಸಿ" ಮೆರವಣಿಗೆಗಳು ನಡೆಯಲಿವೆ.
2. ಅಕ್ಟೋಬರ್ 6ರಂದು, ಎಲ್ಲಾ ವಿರೋಧ ಪಕ್ಷದ ಸಂಸದರು ಚುನಾವಣಾ ಆಯೋಗದ ಕಚೇರಿಗೆ ಮೆರವಣಿಗೆ ನಡೆಸಲಿದ್ದಾರೆ.
3. ಅಕ್ಟೋಬರ್ ಎರಡನೇ ವಾರದಲ್ಲಿ ವಿರೋಧ ಪಕ್ಷದ ನಾಯಕರು ಭಾರತದ ರಾಷ್ಟ್ರಪತಿಗಳ ಭೇಟಿಗೆ ಸಮಯಾವಕಾಶ ಪಡೆಯಲಿದ್ದಾರೆ.
4. ವಿರೋಧ ಪಕ್ಷಗಳಿಂದ ಐದು ಮೆಗಾ ಸಮಾವೇಶಗಳು ನಡೆಯಲಿವೆ.
5. ನವೆಂಬರ್ 1ರಂದು, ದೆಹಲಿಯಲ್ಲಿ ಬೃಹತ್ ಸಮಾವೇಶ.
6. ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವ ಎಸ್‌ಐಆರ್ ಮತ್ತು ಚುನಾವಣಾ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳ ಆರಂಭಿಕ ಇತ್ಯರ್ಥಕ್ಕಾಗಿ ಮನವಿ.

## ಗದ್ದಾರ್ ಜ್ಞಾನೇಶ್ ಬರಹ 20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕೊಲೆ ಯತ್ನ ಕೇಸ್

ನವದೆಹಲಿ: ಎಸ್‌ಐಆರ್ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಜ್ಞಾನೇಶ್ ಕುಮಾರ್ ವಿರುದ್ಧ ವಿರೋಧ ಪಕ್ಷಗಳು ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿರುವ ನಡುವೆಯೇ ಅವರ ಮನೆಯ ಗೋಡೆಯ ಮೇಲೆ ಗದ್ದಾರ್ ಜ್ಞಾನೇಶ್ ಎಂಬ ಬರಹ ಬರೆಯಲಾಗಿದೆ.

ಪ್ರತಿಭಟನೆಯ ಸಂದರ್ಭದಲ್ಲಿ ಜ್ಞಾನೇಶ್ ಕುಮಾರ್ ಅವರ ನಿವಾಸವನ್ನು ವಿರೂಪಗೊಳಿಸಿದ ಆರೋಪದ ಮೇಲೆ 20 ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕೊಲೆ ಯತ್ನ, ಸ್ವಯಂಪ್ರೇರಣೆಯಿಂದ ತೀವ್ರ ಗಾಯಗೊಳಿಸುವುದು ಮತ್ತು ಗಲಭೆ ಉಂಟುಮಾಡುವುದು ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ಬುಧವಾರ ತಿಳಿಸಿವೆ. ಈ ಸಂಬಂಧ ಇಬ್ಬರು ಕಾಂಗ್ರೆಸ್ ನಾಯಕರು ಸೇರಿದಂತೆ ಆರು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

## ಸೌಜನ್ಯಾ ಪ್ರಕರಣ, ಮರು ತನಿಖೆಗೆ 16 ಅಧಿಕಾರಿಗಳ ತಂಡ ರಚನೆ

**ಬೆಂಗಳೂರು:** ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಮರುತನಿಖೆಗಾಗಿ ಎಸ್ ಐಟಿ ತಂಡ ರಚನೆ ಮಾಡಲಾಗಿದೆ. ಇದೀಗ ತಂಡಕ್ಕೆ ಸಹಾಯಕರಾಗಿ 16 ಮಂದಿಯನ್ನು ನೇಮಕ ಮಾಡಲಾಗಿದೆ. ಈ ಸಂಬಂಧ ಡಿಜಿ ಹಾಗೂ ಐಜಿಪಿ ಡಾ. ಎಂ.ಎ ಸಲೀಂ ಅವರು ಸಪ್ಟೆಂಬರ್ 29 ರಂದು ಆದೇಶ ಮಾಡಿದ್ದಾರೆ.

**ತಂಡದ ವಿವರ**

ಐದು ಮಂದಿಯ ಅಧಿಕಾರಿಗಳ ತಂಡವನ್ನು ಸೆ. 24 ರಂದು ಸರಕಾರ ರಚನೆ ಮಾಡಿತ್ತು. ಎಸ್ ಐಟಿ ತನಿಖಾ ದಳದ ಮುಖ್ಯಸ್ಥರಾಗಿ ಐಪಿಎಸ್ ಎನ್ ಶಶಿಕುಮಾರ್ ಪೋಲೀಸ್, ಮಹಾನಿರೀಕ್ಷಕರು ಹಾಗೂ ಸದಸ್ಯರಾಗಿ, ಮಂಗಳೂರು ನಗರ ಪೊಲೀಸ್ ಆಯುಕ್ತರಾದ ಸಿ ಎಚ್ ಸುಧೀರ್ ಕುಮಾರ್ ರೆಡ್ಡಿ ಬೆಂಗಳೂರು ರಾಜ್ಯ ಗುಪ್ತ ವಾರ್ತೆ ಯ ನಿಶಾ ಜೇಮ್ಸ್, ಬೆಂಗಳೂರು ಸಿಐಡಿ ಪೊಲೀಸ್ ಅಧೀಕ್ಷಕರಾದ ಲೋಕೇಶ್ ಜಗಲಸಾರ್ , ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧಿಕ್ಷಕರಾದ ವೆಂಕಟೇಶ್ ಪ್ರಸನ್ನ ಅವರನ್ನು ನೇಮಕ ಮಾಡಲಾಗಿತ್ತು.



**ನೇಮಕ ಮಾಡಿರುವ 16 ಮಂದಿ ಸದಸ್ಯರು ಯಾರ್ಯಾರು?:** ಸೌಜನ್ಯಾ ಪ್ರಕರಣದ ಮರುತನಿಖೆಗೆ ರಚಿಸಿರುವ ಎಸ್ ಐಟಿ ತಂಡದ ತನಿಖಾ ಸಹಾಯಕ್ಕೆ ಸದಸ್ಯರಾಗಿ 16 ಮಂದಿಯನ್ನು ಮಂಗಳವಾರ ನೇಮಕ ಮಾಡಲಾಗಿದೆ. ಇವರು ತಕ್ಷಣವೇ ತಮ್ಮ ಠಾಣೆಗಳಿಂದ ಬಿಡುಗಡೆಗೊಂಡು ಎಸ್‌ಐಟಿ ತಂಡಕ್ಕೆ ಬೆಂಗಳೂರಿನಲ್ಲಿ ವರದಿ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ.

ಎಸ್‌ಐಟಿ ತನಿಖಾ ಸಹಾಯಕರಾಗಿ ಮಂಗಳೂರು ನಗರ ಸಿಸಿಬಿಯ ಎಸಿಪಿ ಮನೋಜ್ ಕುಮಾರ್ ನಾಯಕ್, ಬೆಂಗಳೂರು ಸಿಸಿಬಿ ಎಸಿಪಿ ರಾಮಚಂದ್ರ.ಬಿ, ಸಿ ಐ ಡಿ ಇನ್ಸೆಕ್ಟರ್ ದೀಪಕ್, ಇನ್ಸೆಕ್ಟರ್ ಮೋಹನ್ ಡಿ ಪಾಟೀಲ್, ಮಡಿವಾಳ ಸಂಚಾರ ಪೊಲೀಸ್ ಠಾಣೆ ಇನ್ಸೆಕ್ಟರ್ ಈಶ್ವರಿ, ಕೊಣಾಜೆ ಪೊಲೀಸ್ ಠಾಣೆಯ ಪಿಎಸ್‌ಐ ಪುನೀತ್ ಗಾವಂಕರ್, ದಕ್ಷಿಣ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐಪ್ರದೀಪ್ , ಕಂಕನಾಡಿ ಪೊಲೀಸ್ ಠಾಣೆಯ ಪಿಎಸ್‌ಐ ಅನಿತಾ ನಿಕಂ, ಮಂಗಳೂರು ಸಿಸಿಬಿ ಎ ಎಸ್ ಐ ಮೋಹನ್, ಕಂಕನಾಡಿ ಪೊಲೀಸ್ ಠಾಣೆಯ ಸಿಬ್ಬಂದಿ ಪ್ರದೀಪ್ ಕುಮಾರ್ ರೈ, ಗೋವರ್ಧನ್, ದಿನೇಶ್ ಏನ್, ಉಲ್ಲಾಳ ಪೊಲೀಸ್ ಠಾಣೆಯ ಸಿಬ್ಬಂದಿ ರಾಧಾಕೃಷ್ಣ ಕೆಕೆ, ಕಾವೂರು ಪೊಲೀಸ್ ಠಾಣೆಯ ಸಿಬ್ಬಂದಿ ರೆಜಿ.ವಿ.ಎಂ, ಸುರತ್ಕಲ್ ಪೊಲೀಸ್ ಠಾಣೆಯ ಸಿಬ್ಬಂದಿ ರಾಜೇಂದ್ರ ಪ್ರಸಾದ್ ವಿಪಿ, ಕಂಕನಾಡಿ ಪೊಲೀಸ್ ಠಾಣೆ ಮಹಿಳಾ ಸಿಬ್ಬಂದಿ ಪ್ರಮೀಳ ಅವರನ್ನು ಒಳಗೊಂಡ ತನಿಖಾ ತಂಡವನ್ನು ರಚನೆ ಮಾಡಲಾಗಿದೆ.

## ಬಿಜೆಪಿಗಿಂತ ಕಾಂಗ್ರೆಸ್ ಸರ್ಕಾರದಲ್ಲೇ ಹೆಚ್ಚು ಕಮಿಷನ್ ಕಾಟ: ಆರ್. ಮಂಜುನಾಥ್ ಆರೋಪ

**ಬೆಂಗಳೂರು:** ರಾಜ್ಯ ಸರ್ಕಾರದ ವಿರುದ್ಧ ಮತ್ತೆ ಸಿಡಿದೆದ್ದ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ, ಕಳೆದ ನಾಲ್ಕು ವರ್ಷದಿಂದ ಬಿಲ್ ಪಾವತಿಯಾಗದೆ 1.5 ಲಕ್ಷ ಗುತ್ತಿಗೆದಾರರು ಪರದಾಡುತ್ತಿದ್ದಾರೆ. 8 ಇಲಾಖೆಯಲ್ಲಿ ಸುಮಾರು 38 ಸಾವಿರ ಕೋಟಿ ಹಣ ಬಾಕಿ ಇದೆ ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಬುಧವಾರ ಹೇಳಿದ್ದಾರೆ. ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಮಂಜುನಾಥ್ ಅವರು, ಬಾಕಿ ಬಿಲ್ ಪಾವತಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದು, ನವೆಂಬರ್ ಒಳಗೆ ಬಾಕಿ ಹಣ ಬಿಡುಗಡೆ ಮಾಡದಿದ್ದರೆ ಕಮಿಷನ್ ದಂಧೆಯ ದಾಖಲೆ ಬಿಡುಗಡೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ಕಾಂಗ್ರೆಸ್ ಸರ್ಕಾರದಲ್ಲಿ ಕಳೆದ ಸರ್ಕಾರಕ್ಕಿಂತಲೂ ಕಮಿಷನ್ ಹೆಚ್ಚಾಗಿದ್ದು, ಅದು ಎಷ್ಟು ಪರ್ಸೆಂಟೇಜ್ ಅಂತ ಕೇಳಬೇಡಿ ಎಂದು ಗುತ್ತಿಗೆದಾರ ಸಂಘದ ಅಧ್ಯಕ್ಷ ಮಂಜುನಾಥ್ ಹೇಳಿಕೆ ನೀಡಿದ್ದಾರೆ.

**ಶೇ.70 ರಷ್ಟು ಶಾಸಕರಿಂದ ಕಮಿಷನ್ ಕಾಟ:** ಇತ್ತೀಚಿಗೆ ಶಾಸಕರು ಸಹ ಗುತ್ತಿಗೆದಾರರ ವಿಚಾರದಲ್ಲಿ ಮೂಗು ತೂರಿಸುತ್ತಿದ್ದಾರೆ. ಟೆಂಡರ್ ಆದ್ರೆ ಶಾಸಕರ ಬಳಿ ಮೊದಲು ಹೋಗಬೇಕು. ಅವರು ಓಕೆ ಅಂದಮೇಲೆ ಕಾಮಗಾರಿ ಶುರು ಆಗುತ್ತೆ. ಈ ವಿಚಾರ ಸಿಎಂಗೂ ಗೊತ್ತಿದೆ ಎಂದರು. ಹಿಂದೆ ಚುನಾವಣೆ ಬಂದಾಗ ಮಾತ್ರ ದುಡ್ಡು ಕೇಳುತ್ತಿದ್ದರು. ಆದರೆ ಈಗ ಶೇ. 70ರಷ್ಟು ಶಾಸಕರು ಪ್ರತಿಯೊಂದು ಕಾಮಗಾರಿಯಲ್ಲೂ ಮೂಗು ತೂರಿಸುತ್ತಿದ್ದಾರೆ. ಟೆಂಡರ್ ಮಂಜೂರಾದ ತಕ್ಷಣ ಶಾಸಕರ ಬಳಿ ಹೋಗಬೇಕು, ಪೇಮೆಂಟ್ ಆದ ತಕ್ಷಣ ಅವರಿಗೆ ಪಾಲು ತಲುಪಿಸಬೇಕು. ಅಧಿಕಾರಿಗಳು ಹಾಗೂ ಮಧ್ಯವರ್ತಿಗಳ ಮೂಲಕ ಕಮಿಷನ್‌ಗೆ ಪೀಡಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಚಿವರಿಗೂ ಕಮಿಷನ್ ಹೋಗುತ್ತಿದೆ. ಹೊಸ ಸಚಿವರಿಗೆ ಪೇಮೆಂಟ್ ಇನ್ನೂ ತಲುಪಿಲ್ಲ. ಸತೀಶ್ ಜಾರಕಿಹೊಳಿ ಅವರ ಇಲಾಖೆ ಹಾಗೂ ಬಿಬಿಎಂಪಿ ಹೊರತುಪಡಿಸಿದರೆ ಉಳಿದೆಲ್ಲಾ ಇಲಾಖೆಗಳಲ್ಲಿ ಕಮಿಷನ್ ವಹಿವಾಟು ಎಗ್ಗಿಲ್ಲದೆ ಸಾಗಿದೆ ಎಂದು ದೂರಿದರು.

## ಶರ್ಮಾ ಶತಕ, ಗಿಲ್ ದ್ವಿಶತಕ, ಭಾರತಕ್ಕೆ ಭರ್ಜರಿ ಜಯ– ಸರಣಿ ಟೀಂ ಇಂಡಿಯಾ ವಶ

**ಗುವಾಹಟಿ:** ಶುಭಮನ್ ಗಿಲ್ ಅವರ ಅಜೇಯ ದ್ವಿಶತಕ ಮತ್ತು ರೋಹಿತ್ ಶರ್ಮಾ ಅವರ ಮನಮೋಹಕ ಶತಕಗಳ ನೆರವಿನಿಂದ ಆತಿಥೇಯ ಭಾರತ ತಂಡ ಪ್ರವಾಸಿ ವೆಸ್ಟ್ ಇಂಡೀಸ್ ಅನ್ನು 8 ವಿಕೆಟ್ ಗಳಿಂದ ಭರ್ಜರಿಯಾಗಿ ಸೋಲಿಸಿದೆ. ಈ ಮೂಲಕ 3 ಪಂದ್ಯಗಳ ಸರಣಿಯನ್ನು ಇನ್ನೂ 1 ಪಂದ್ಯ ಬಾಕಿ ಉಳಿದಿರುವಂತೆ ಗೆದ್ದು ಬೀಗಿದೆ.

ಗುವಾಹಟಿಯ ಬಾರಾಸ್ಪರ ಕ್ರಿಕೆಟ್ ಮೈದಾನದಲ್ಲಿ ಸೆಪ್ಟೆಂಬರ್ 30ರ ಬುಧವಾರ ನಡದ ಪಂದ್ಯ ಅಕ್ಷರಶಃ ರನ್ ಪ್ರವಾಹಕ್ಕೆ ಸಾಕ್ಷಿಯಾಯಿತು. ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ತಂಡ ಜಾನ್ ಕ್ಯಾಂಬೆಲ್, ಶಾಯಿ ಹೋಪ್ ಮತ್ತು ಅಮಿರ್ ಜಾಂಗೋ ಅವರ ಶತಕಗಳ ನೆರವಿನಿಂದ 7 ವಿಕೆಟ್ ನಷ್ಟಕ್ಕೆ 405 ರನ್ ಕಲೆ ಹಾಕಿತು. ಈ ಮೊತ್ತವನ್ನು ಲೆಕ್ಕಕ್ಕಿಲ್ಲದಂತೆ ಆಡಿದ ಭಾರತ ತಂಡ ಇನ್ನೂ 39 ಎಸೆತಗಳು ಬಾಕಿ ಉಳಿದಿರುವಂತೆ ಕೇವಲ 2 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಒಟ್ಟಾರೆ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಇದು 2ನೇ ಅತಿ ದೊಡ್ಡ ಚೇಸ್ ಆಗಿದೆ.



## ಎನ್ಕೌಂಟರ್‌ಗೆ ಲಷ್ಕರ್ – ಎ–ತೊಯ್ಬಾ ಉಗ್ರ ಹತ

### ನಿರ್ದಿಷ್ಟವಾದ ಗುಪ್ತಚರ ಮಾಹಿತಿಯ ಆಧಾರದ ಮೇಲೆ ವಿಶೇಷ ಜಂಟಿ ಕಾರ್ಯಾಚರಣೆ

**ಶ್ರೀನಗರ :** ಪೊಲೀಸರು ಮತ್ತು CRPF ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಮೂಲದ ಲಷ್ಕರ್ – ಎ–ತೊಯ್ಬಾ ಉಗ್ರ ಸಂಘಟನೆಯ, ಉಗ್ರನೊಬ್ಬನನ್ನು ಎನ್ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಬುಡ್ಗಾಮ್ ಜಿಲ್ಲೆಯ ಯೂಸ್‌ಮಾರ್ಗ್ ಪ್ರದೇಶದಲ್ಲಿ, ಮಂಗಳವಾರ (ಸೆ. 29) ತಡರಾತ್ರಿ ಈ ಕಾರ್ಯಾಚರಣೆ ನಡೆದಿದೆ.



ಹತನಾದವನನ್ನು ಉಗ್ರ ಮೊಹಮ್ಮದ್ ಆಸಿಫ್ ಆಲಿಯಾಸ್ ಹಾಶಿಂ ಮೂಸಾ ಎಂದು ಗುರುತಿಸಲಾಗಿದೆ. ಈತ, ಪಹಲ್ಗಾಮ್ ನರಮೇಧದ ಹಿಂದಿನ ಪ್ರಮುಖ ಮಾಸ್ಟರ್‌ಮೈಂಡ್. ನಿರ್ದಿಷ್ಟವಾದ ಗುಪ್ತಚರ ಮಾಹಿತಿಯ ಆಧಾರದ ಮೇಲೆ. ಈ ಕಾರ್ಯಾಚರಣೆಯನ್ನು ಜಂಟಿಯಾಗಿ ನಡೆಸಲಾಗಿದೆ ಎಂದು ಶ್ರೀನಗರದಲ್ಲಿರುವ ಸೇನಾ ವಕ್ತಾರರು ಮಾಹಿತಿಯನ್ನು ನೀಡಿದ್ದಾರೆ. ಹಿಂದೆ ಎರಡು ಬಾರಿ ಈತ ಕಾರ್ಯಾಚರಣೆಯಲ್ಲಿ ತಪ್ಪಿಸಿಕೊಂಡಿದ್ದ.

**ಅನುಮಾನಾಸ್ಪದ ಚಲನವಲನದ ಹಿನ್ನಲೆಯಲ್ಲಿ ಎಚ್ಚರಿಕೆ:** ಕಾರ್ಯಾಚರಣೆಯ ವೇಳೆ ಭದ್ರತಾ ಪಡೆಗಳು, ಅನುಮಾನಾಸ್ಪದ ಚಲನವಲನದ ಹಿನ್ನಲೆಯಲ್ಲಿ ಎಚ್ಚರಿಕೆಯನ್ನು ಈತನಿಗೆ ನೀಡಿದ್ದರು. ಆದರೆ, ಆತ ಮಿಲಿಟರಿ ಮತ್ತು ಪೊಲೀಸರ ಮೇಲೆ ದಾಳಿಯನ್ನು ಆರಂಭಿಸಿದ. ಇದಕ್ಕೆ ಪ್ರತ್ಯುತ್ತರವಾಗಿ ಗುಂಡಿನ ಚಕಮಕಿಯಲ್ಲಿ ಹಾಶಿಂ ಮೂಸಾ ಹತನಾಗಿದ್ದಾನೆ. ಈ ಕಾರ್ಯಾಚರಣೆ ಇನ್ನಷ್ಟು ಮುಂದುವರಿದಿದ್ದು ಉಗ್ರರ ಜಾಲವನ್ನು ಜಂಟಿಯಾಗಿ ಬೇಧಿಸುವ ಪ್ರಯತ್ನ ನಡೆಯುತ್ತಿದೆ.

ಮಾರ್ಚ್ 7, 1980ರಲ್ಲಿ ಜನಿಸಿದ ಮೂಸಾ, ಇಸವಿ 2000ರಲ್ಲಿ ಪಾಕಿಸ್ತಾನದ ಮಿಲಿಟರಿ ಸೇರಿದ್ದ. ಅಲ್ಲಿಂದ, ಹವಲ್ದಾರ್ ಹುದ್ದೆಯ ಮೂಲಕ ನಿವೃತ್ತಿ ಹೊಂದಿದ್ದ. 2005ರಲ್ಲಿ ಸ್ಪೆಷಲ್ ಸರ್ವಿಸ್ ಗ್ರೂಪ್‌ಗೆ ಸೇರಿಕೊಂಡಿದ್ದ. 2006ರಿಂದ ಬಲೂಚಿಸ್ತಾನದಲ್ಲಿ ಯಲ್ಗಾರ್ ಬೆಟಾಲಿಯನ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ. ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್, ವಿವಿಐಪಿ ಭದ್ರತೆಯ ಪಡೆಯಲ್ಲೂ ಈತನ ಕೆಲಸ ನಿರ್ವಹಿಸಿದ್ದ.

ಹಾಶಿಂ ಮೂಸಾ ಹೊಡೆದುರುಳಿಸುವುದರಲ್ಲಿ ಯಶಸ್ವಿ ಹಾಶಿಂ ಮೂಸಾ, ಪಾಕಿಸ್ತಾನದ ಸ್ಪೆಷಲ್ ಸರ್ವಿಸ್ ಗ್ರೂಪಿನ ಮಾಜಿ ಪ್ಯಾರಾ–ಕಮಾಂಡೋ ಆಗಿದ್ದ. ಜೊತೆಗೆ, ಲಷ್ಕರ್–ಎ–ತೈಬಾ ಉಗ್ರ ಸಂಘಟನೆಯಲ್ಲಿ ಫೌಜಿ ಮೂಸಾ ಎಂದೇ ಕುಖ್ಯಾತಿ ಪಡೆದಿದ್ದ. ಈತನ ಮೇಲೆ ಜಮ್ಮು ಮತ್ತು ಕಾಶ್ಮೀರ ಪೊಲೀಸರು 20 ಲಕ್ಷ ರೂಪಾಯಿ ಬಹುಮಾನವನ್ನು ಘೋಷಿಸಿದ್ದರು. ರಾಜ್ಯದ ಬುದ್ಗಾಮ್‌ನಲ್ಲಿ ನಡೆದ 'ಆಪರೇಷನ್ ಕೊರಾಗ್' ಕೊನೆಗೂ ಸಕ್ಸಸ್ ಆಗಿದ್ದು, ಹಾಶಿಂ ಮೂಸಾನನ್ನು ಹೊಡೆದುರುಳಿಸುವಲ್ಲಿ ಭದ್ರತಾ ಪಡೆಗಳು ಯಶಸ್ವಿಯಾಗಿವೆ.

**ಭದ್ರತಾ ಪಡೆಗಳ ಬೃಹತ್ ಕಾರ್ಯಾಚರಣೆ:** ಮಂಗಳವಾರ ರಾತ್ರಿ ಆರಂಭವಾದ ಗುಂಡಿನ ಚಕಮಕಿಯ ನಂತರ, ತಡರಾತ್ರಿಯಲ್ಲಿ ಈತನನ್ನು ಜಂಟಿ ಪಡೆಗಳು ಫಿನಿಷ್ ಮಾಡಿವೆ. ಭಾರೀ ಪ್ರಮಾಣದ ಯುದ್ಧ ಸಾಮಗ್ರಿಗಳು ಭದ್ರತಾ ಪಡೆಗಳ ಕೈಗೆ ಸಿಕ್ಕಿವೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ನಡೆದ ಪಹಲ್ಗಾಮ್ ದಾಳಿಯಿಂದ ಹಿಡಿದು, ಇವತ್ತಿನ ಈ ಅಂತಿಮ ಎನ್ಕೌಂಟರ್ ವರೆಗೆ ಭಾರತೀಯ ಭದ್ರತಾ ಪಡೆಗಳು ನಡೆಸಿದ 8 ತಿಂಗಳ ಬೃಹತ್ ಕಾರ್ಯಾಚರಣೆ ಇದಾಗಿದೆ. ಪಹಲ್ಗಾಮ್ ದಾಳಿಯಲ್ಲಿ 26 ಅಮಾಯಕರು ಪ್ರಾಣ ಕಳೆದುಕೊಂಡಿದ್ದರು.

**ಕೊರಾಗ್ ಅರಣ್ಯ ಪ್ರದೇಶದಲ್ಲಿ ಹಾಶಿಂ ಮೂಸಾ ಹತ್ಯೆ:** ಮ್ಮು ಕಾಶ್ಮೀರದ ಬುದ್ಗಾಮ್ ಜಿಲ್ಲೆಯ ಯೂಸ್‌ಮಾರ್ಗ್ ಮತ್ತು ದೂದ್‌ಪತ್ರಿ ಸಮೀಪದ ಕೊರಾಗ್ ಅರಣ್ಯ ಪ್ರದೇಶದಲ್ಲಿ ಹಾಶಿಂ ಮೂಸಾ ಎನ್ನುವ ಖತರ್ನಾಕ್ ಪಾಕಿಸ್ತಾನಿ ಉಗ್ರ ಅವಿತು ಕೊಂಡಿದ್ದಾನೆ ಎನ್ನುವ ನಿಖರ ಗುಪ್ತಚರ ಮಾಹಿತಿ ಭಾರತೀಯ ಮಿಲಿಟರಿ ಪಡೆಗಳಿಗೆ ಸಿಕ್ಕಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಸೇನೆಯ ಚಿನಾರ್ ಕಾರ್ಪ್ಸ್, ಜಮ್ಮು–ಕಾಶ್ಮೀರ ಪೊಲೀಸ್ ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಜಂಟಿಯಾಗಿ ಆಪರೇಷನ್ ಕೊರಾಗ್ ಹೆಸರಿನಲ್ಲಿ ಶೋಧ ಕಾರ್ಯಾಚರಣೆಯನ್ನು ಶುರು ಮಾಡಿದ್ದರು.

ಶರಣಾಗುವಂತೆ ಎಚ್ಚರಿಕೆ ನೀಡಿದ ತಕ್ಷಣ ಹಾಶಿಂ ಮೂಸಾ, ಕತ್ತಲಿನಲ್ಲಿ ಅವಿತುಕೊಂಡು, ಮಿಲಿಟರಿ ಪಡೆಗಳ ಮೇಲೆ ಮನಬಂದಂತೆ ಗುಂಡಿನ ದಾಳಿ ಆರಂಭಿಸಿದ್ದ. ಭದ್ರತಾ ಪಡೆಗಳು ತಕ್ಷಣವೇ ಪ್ರತಿಯಾಗಿ ತೀವ್ರ ದಾಳಿ ನಡೆಸಿ ಹಾಶಿಂ ಮೂಸಾನನ್ನು ಹತ್ಯೆಗೈದಿದ್ದಾರೆ.

ಸತ್ಯ ಮಿಥ್ಯ
SATYA MITHI
Kannada Daily Morning

# ಬರ ಪರಿಸ್ಥಿತಿ ಸಮರ್ಥವಾಗಿ ನಿಭಾಯಿಸಿ: ಡಾ.ಎಂ.ವಿ. ವೆಂಕಟೇಶ್

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಂದ ಬರ ನಿರ್ವಹಣೆ ಕುರಿತು ಸಭೆ

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ಜಿಲ್ಲೆಯ ಬರ ಪರಿಸ್ಥಿತಿ ಸಮರ್ಥವಾಗಿ ನಿಭಾಯಿಸಬೇಕು. ಜನರು ಉದ್ಯೋಗ ಇಲ್ಲದೇ ಬೇರೆ ಕಡೆಗೆ ಗುಳೇ ಹೋಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಸಹಕಾರ ಸಂಘಗಳ ನಿಬಂಧಕರು ಮತ್ತು ಜಿ.ಪಂ. ಆಡಳಿತಾಧಿಕಾರಿ ಡಾ.ಎಂ.ಬಿ.ವೆಂಕಟೇಶ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲೆಯ ಬರ ಪರಿಸ್ಥಿತಿ ಕುರಿತು ಜರುಗಿದ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಅವರು ತಿಳಿಸಿದರು. ಬರಲಿರುವ ಹಿಂಗಾರಿನ ಕುರಿತು ಪೂರ್ವ ತಯಾರಿ ಮಾಡಿಕೊಳ್ಳಬೇಕು. ಬರ ಪರಿಸ್ಥಿತಿಯಿಂದಾಗಿ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಾಗ ರೇಷ್ಮೆ ಕೃಷಿಗೆ ಹೆಚ್ಚು ಒತ್ತುಕೊಡಬೇಕು. ಪ್ರತಿ ಪಂಚಾಯತ್‌ದಲ್ಲಿ ಮನರೇಗಾ ಯೋಜನೆಯಡಿ 1 ಅಮೃತ ಸರೋವರ ನಿರ್ಮಾಣಕ್ಕೆ ಕ್ರಮ ವಹಿಸಬೇಕು. ಸಮಾಜ ಕಲ್ಯಾಣ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆ ಫಲಿತಾಂಶ ಹೆಚ್ಚಿಸಲು ಕ್ರಮ ವಹಿಸಬೇಕು. ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ಪೌಷ್ಟಿಕಾಂಶ ಆಹಾರ ವಿತರಣೆ ಜೊತೆಗೆ ಔಪಚಾರಿಕ ಶಿಕ್ಷಣ ಒದಗಿಸಬೇಕು. ಎಸ್.ಸಿ.ಪಿ/ ಟಿ.ಎಸ್.ಪಿ. ಯೋಜನೆಯಡಿ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಬಿಡುಗಡೆಯಾದ ಅನುದಾನ ಯಾವುದೇ ಕಾರಣಕ್ಕೂ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ಸಹಕಾರ ಸಂಘಗಳ ನಿಬಂಧಕರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ



ಡಾ.ಎಂ.ವಿ.ವೆಂಕಟೇಶ್ ತಿಳಿಸಿದರು. ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಮಾತನಾಡಿ ಜಿಲ್ಲೆಯ ವಿವಿಧ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ಬರ ಪರಿಸ್ಥಿತಿ ನಿಭಾಯಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದ ಕ್ರಮಗಳನ್ನು ಚಾಚೂ ತಪ್ಪದಂತೆ ಪಾಲಿಸಬೇಕೆಂದು ತಿಳಿಸಿದರು. ಜಿ.ಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಕುಲ್ ಜೈನ್ ಮಾತನಾಡಿ ಅವರು ಮಾತನಾಡಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾದ 59 ಗ್ರಾಮಗಳನ್ನು ಗುರುತಿಸಲಾಗಿದೆ. ಎರಡು ಡಿ.ಬಿ.ಓ.ಟಿ. ಮತ್ತು ಹತ್ತು ಎಂ.ವಿ.ಎಸ್. ಯೋಜನೆಗಳ ಮೂಲಕ ಗ್ರಾಮೀಣ ಪ್ರದೇಶಕ್ಕೆ ನದಿ ಮೂಲದಿಂದ ನೀರು ಸರಬರಾಜು ಮಾಡುತ್ತಿದ್ದು ಪ್ರಸ್ತುತ ಲಭ್ಯವಿರುವ ನೀರು ಡಿಸೆಂಬರ್ ಅಂತ್ಯದವರೆಗೆ ಕುಡಿಯುವ ನೀರಿನ ಕೊರತೆ ಇರುವುದಿಲ್ಲ ಎಂದರು.

ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ ಅವರು ಮಾತನಾಡಿ ಜಿಲ್ಲೆಯಲ್ಲಿ ವಿಬಿಜಿರಾಮ್ ಜಿ ಯೋಜನೆಯಡಿಯಲ್ಲಿ 233844 ಕ್ರಿಯಾ ನೊಂದಾಯಿತ ಕೂಲಿಕಾರರಿದ್ದಾರೆ. 8044 ಮನರೇಗಾ ಮುಂದುವರೆದ ಕಾಮಗಾರಿಗಳಿವೆ ಎಂದು ಸಭೆಗೆ ತಿಳಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಶ್ರೀಮತಿ ಚೇತನಾ ಪಾಟೀಲ ಮಾತನಾಡಿ ಮುಂಗಾರು ಹಂಗಾಮಿನಲ್ಲಿ 118697.8 ಹೆಕ್ಟೇರ್ ಕೃಷಿ ಕ್ಷೇತ್ರ ಹಾಗೂ 6651.34 ತೋಟಗಾರಿಕೆ ಕ್ಷೇತ್ರ ಸೇರಿದಂತೆ ಒಟ್ಟಾರೆ 125349.14 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಬೆಳೆ ಹಾನಿ ಕುರಿತು ಎನ್.ಡಿ.ಆರ್.ಎಫ್ / ಎಸ್.ಡಿ.ಆರ್.ಎಫ್ ನಿಂದ ಒಟ್ಟು 11574.46 ಲಕ್ಷ ರೂ. ನೆರವು ಕೋರಲಾಗಿದೆ. ರಸಗೊಬ್ಬರದ ವಿತರಣೆಯಲ್ಲಿ ಯಾವುದೇ ಕೊರತೆಯಿರುವುದಿಲ್ಲ. ಪ್ರಧಾನ ಮಂತ್ರಿ ಫಸಲ ಬಿಮಾ ಯೋಜನೆಯಡಿ 179116 ರೈತರ ನೊಂದಣಿಯಾಗಿದೆ ಎಂದು ಸಭೆಗೆ ವಿವರಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಸರ್ವರನ್ನು ಸ್ವಾಗತಿಸಿದರು. ಜಿ.ಪಂ. ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ, ಯೋಜನಾ ನಿರ್ದೇಶಕ ಎಂ.ಎ. ಚಳಗೇರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ ಸೇರಿದತೆ ವಿವಿಧ ಇಲಾಖೆಯ ಅಧಿಕಾರಿಗಳು ವಿಡಿಯೋ ಸಂವಾದ ಸಭೆಯಲ್ಲಿ ಹಾಜರಿದ್ದು ಇಲಾಖೆಯ ಪ್ರಗತಿಯನ್ನು ವಿವರಿಸಿದರು.

## ಕೋಡಿಹಳ್ಳಿ ಚಂದ್ರಶೇಖರ್ ಬಂಧನ ಖಂಡಿಸಿ ಗಜೇಂದ್ರಗಡದಲ್ಲಿ ರೈತ ಸಂಘದಿಂದ ಮೌನ ಪಾದಯಾತ್ರೆ: ತಹಶೀಲ್ದಾರ್‌ಗೆ ಮನವಿ ಸಲ್ಲಿಕೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷರಾದ ಕೊಡಿಹಳ್ಳಿ ಚಂದ್ರಶೇಖರ ಅವರ ಬಂಧನವನ್ನು ಖಂಡಿಸಿ, ಅವರ ತಕ್ಷಣದ ಬಿಡುಗಡೆಗೆ ಆಗ್ರಹಿಸಿ ಮೌನ ಪ್ರತಿಭಟನೆ ಹಾಗೂ ಪಾದಯಾತ್ರೆ ನಡೆಸಲಾಯಿತು.

2013ರ ಮಹದಾಯಿ ನೀರಾವರಿ ಹೋರಾಟಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧಿತರಾಗಿರುವ ಕೊಡಿಹಳ್ಳಿ ಚಂದ್ರಶೇಖರ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಹಾಗೂ ರೈತ ಹೋರಾಟಗಾರರ ಮೇಲಿರುವ ಚಳುವಳಿ ಸಂಬಂಧಿತ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಲಾಯಿತು. ಪಟ್ಟಣದ ಕಾಲಕಾಲೇಶ್ವರ ವೃತ್ತದಿಂದ ತಹಶೀಲ್ದಾರ ಕಚೇರಿವರೆಗೆ ಮೌನ ಪಾದಯಾತ್ರೆ ನಡೆಸಿದ ರೈತ ಮುಖಂಡರು, ತಹಶೀಲ್ದಾರರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಡಿ. ಕೆ. ಶಿವಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ಅನೀಲ್ ಕರ್ಣೆ, ಗೌರವ ಅಧ್ಯಕ್ಷರಾದ ಮಹಾದೇವ ವೇರ್ಣೇಕರ, ಅಂದಪ್ಪ ಅಂಗಡಿ, ಹುಚ್ಚುಸಾಬ ಬಡಿಗೇರ, ರಮೇಶ ವದೆಗೋಳ, ರಾಮಪ್ಪ ಮಳೋತ್ತರ, ಶಿವಕುಮಾರ ಕಲ್ಮಠ, ಬಸವರಾಜ್ ಹಿಟ್ನಳ್ಳಿ, ಹನುಮಂತ ಪುರ್ತಗೇರಿ, ಶ್ರೀಕಾಂತ ಹರಪನಹಳ್ಳಿ, ಮುತ್ತಣ್ಣ ಕುಂಬಾರ, ಉಮೇಶ ಕುಕ್ಕುಬಾಯಿ, ಮಂಜುನಾಥ ಹೊಸಮನಿ, ಕಾಶಪ್ಪ ಆರೇರ, ಹುಚ್ಚಪ್ಪ ಪರಸಪ್ಪ ಹೊರಪೇಟಿ ಹಾಗೂ ಸಲೀಮ್ ಇಟಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಸಾರ್ವಜನಿಕರಿಂದ ಹಣ ವಸೂಲಿ: ಸಿಕ್ಕಿಹಾಕಿಕೊಂಡ ಪುರಸಭೆ ಸಿಬ್ಬಂದಿ ವಿರುದ್ದ ಕಠಿಣ ಕ್ರಮಕ್ಕೆ ಆಗ್ರಹ : ಮೋಹನ ಲಮಾಣಿ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಪಟ್ಟಣದ ಪುರಸಭೆಯಲ್ಲಿ ದಿನೆ ದಿನೆ ಹಲವಾರು ಅಕ್ರಮಗಳು ನಡೆಯುತ್ತಲೆ ಇವೆ, ಅವುಗಳ ಕುರಿತು ಪ್ರಶ್ನಿಸಿದಾಗ ಹಾರಿಕೆ ಉತ್ತರ ನೀಡಿ ಬಚಾವ ಆಗುತ್ತಿದ್ದರು, ಇತ್ತಿಚೆಗೆ ಪುರಸಭೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೀರು ಸರಬರಾಜು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲಕ್ಕಪ್ಪಾ ಪೂಜಾರಿ ಎಂಬಾತನು ಸಾರ್ವಜನಿಕರೊಬ್ಬರು ಮರಣ ಪ್ರಮಾಣ ಪತ್ರದ ಸಲುವಾಗಿ ಕರ್ಯಾಲಯಕ್ಕೆ ಬಂದಾಗ ಅವರ ಬಳಿ ಒಂದು ಸಾವಿರ ಲಂಚ ಪಡೆಯವ ಸಂದರ್ಭದಲ್ಲಿ ನಮಗೆ ರೆಡ್ ಹ್ಯಾಂಡ ಆಗಿ ಸಿಕ್ಕಿಬಿದ್ದಿದ್ದಾನೆ. ಇದೆ ರೀತಿ ಸಾರ್ವಜನಿಕರಿಂದ ಹಣ ವಸೂಲಿ ಮಾಡಿ ಆರೋಪಗಳು ಸಾಕಷ್ಟಿವೆ ಈ ಕುರಿತು ಸೂಕ್ತ ತನಿಖೆ ನಡೆಸಿ ಸಿಬ್ಬಂದಿಯ ವಿರುದ್ಧ ಅಗತ್ಯಕ್ರಮ ಕೈಗೊಂಡು ಅಮಾನತ್ತು ಮಾಡಬೇಕು ಮತ್ತು ಘಟನೆ ನಡೆದ ದಿನ ಅಂದರೆ ಸೆ.24 ರಂದು 12 ಗಂಟಯಿಂದ ಸಾಯಂಕಾಲ ನಾಲ್ಕು ಗಂಟೆ-ಯ ವರೆಗಿನ ಸಿಸಿಟಿವ್ಹಿ ದೃಶ್ಯಗಳು ನಾಶವಾಗದಂತೆ ಸಂಗ್ರಹಿಸಿ ತನಿಖೆಗೆ ಒದಗಿಸಬೇಕೆಂದು ಕೆ ಅರ್ ಎಸ್ ಪಕ್ಷದ ಬೆಳಗಾವಿ ಜಿಲ್ಲಾ ಕಾರ್ಯದರ್ಶಿ ಮೋಹನ ಲಮಾಣಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೆ.30 ರಂದು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಶಿವಾನಂದ ಹುನ್ನೂರ, ಅಮರ ನಡುವಿನಕೇರಿ, ಲೋಹಿತ ಚೌಡಕಿ, ಮಾಳು ಪೂಜೇರಿ ಹಾಗೂ ಪುರಸಭೆ ಸಿಬ್ಬಂದಿ ಹಾಗೂ ಕೆ ಅರ್ ಎಸ್ ಪಕ್ಷದ ಕಾರ್ಯಕರ್ತರು ಇದ್ದರು.



### ಅಧಿಕಾರಿಗಳ ನಡೆಗೆ ತೀವ್ರ ಆಕ್ರೋಶ

**ಸೆ.29 ರಂದು ಪುರಸಭೆಯಲ್ಲಿ ಮುಂಜಾನೆಯಿಂದ ಮಧ್ಯಾನ್ಹದವರೆಗೆ ಸಾಮಾನ್ಯ ಸಭೆ ನಡೆಯಿತು ಈ ಕುರಿತು ಸಾರ್ವಜನಿಕರಿಗೆ ಯಾವುದೆ ಸೂಚನೆ ಅಥವಾ ಸೂಚನಾ ಫಲಕದ ಮೇಲೆ ಮಾಹಿತಿ ನೀಡದೆ ಪ್ರತಿ ಸಭೆ ನಡೆಸಲಾಗುತ್ತಿದೆ. ಇದರಿಂದ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಬಂದಾಗ ಅವರ ಸಭೆ ಮುಗಿಯುವವರೆಗೂ ಕಾಯುವಂತ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು ಇದರಿಂದ ಸಾರ್ವಜನಿಕವಾಗಿ ತೊಂದರೆಯಾಗುತ್ತಿದ್ದು, ಇಂತಹ ಸಭೆ ಅಥವಾ ಅಧಿಕಾರಿಗಳ ಅಲಭ್ಯದ ಕರಿತು ಜನರಿಗೆ ಸೂಚನಾ ಫಳಕದ ಮೂಲಕ ಮಾಹಿತಿ ತಿಳಸಬೇಕು ಎಂದು ಕೆ ಅರ್ ಎಸ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮೋಹನ ಲಮಾಣಿ ಅಧಿಕಾರಿಗಳ ಈ ನಡೆಗೆ ತೀವ್ರ ಆಕ್ರೋಶ ಹೊರ ಹಾಕಿದ್ದಾರೆ, ಈ ಕುರಿತು ಸೆ.29 ರಂದು ಸಭೆ ನಡೆವ ಸಂದರ್ಭದಲ್ಲಿ ಮಾಹಿತು ಪಡೆಯಲು ಹೋದಾಗ, ಸಭಾಭವನದ ಹೊರಗಡೆ ಪುರಸಭೆ ಸದಸ್ಯರ ಹಾಗೂ ಮೋಹನ ಲಮಾಣಿ ಇವರ ಮದ್ಯ ವಾಗ್ವಾದ ಎರ್ಪಟ್ಟಿತು ಕೆಲ ಸಮಯದವರೆಗೆ ಗೊಂದಲದ ವಾತಾವರಣ ಸೃಷ್ಟಿಯಾಯಿತು.**

## ಉಳಿತಾಯದ ಅಭ್ಯಾಸವೇ ಭದ್ರ ಭವಿಷ್ಯಕ್ಕೆ ಬುನಾದಿ; ವಿದ್ಯಾರ್ಥಿಗಳಿಗೆ ಬ್ಯಾಂಕಿಂಗ್ ಅರಿವು

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಇಂದಿನ ವಿದ್ಯಾರ್ಥಿಗಳು ಹಣಕಾಸಿನ ವ್ಯವಹಾರಗಳ ಕುರಿತು ತಿಳಿವಳಿಕೆ ಹೊಂದುವುದರ ಜೊತೆಗೆ, ಚಿಕ್ಕ ವಯಸ್ಸಿನಿಂದಲೇ ಉಳಿತಾಯದ ಅಭ್ಯಾಸ ಬೆಳೆಸಿಕೊಳ್ಳುವುದು ಅಗತ್ಯ ಎಂದು ಎಸ್‌ಬಿಐ ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ ಹೇಳಿದರು.

ಪಟ್ಟಣದ ಶ್ರೀ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳು ಹಾಗೂ ಬ್ಯಾಂಕಿಂಗ್ ಸೇವೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ, ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆಗಳ ಉದ್ದೇಶ, ಅರ್ಹತೆ ಹಾಗೂ ಪ್ರಯೋಜನಗಳ ಕುರಿತು ವಿವರಿಸಿದ ಅವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸರ್ಕಾರದ ಯೋಜನೆಗಳ ಬಗ್ಗೆ ತಿಳಿದುಕೊಂಡು ಅವುಗಳ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಹೆಣ್ಣುಮಕ್ಕಳ ಭವಿಷ್ಯದ ಶಿಕ್ಷಣ ಮತ್ತು ಆರ್ಥಿಕ ಭದ್ರತೆಗೆ ಸುಕನ್ಯಾ ಸಮೃದ್ಧಿ ಯೋಜನೆ ಸಹಕಾರಿಯಾಗಿದ್ದು, ಬಾಲ್ಯದಿಂದಲೇ ಉಳಿತಾಯದ ಮನೋಭಾವ ಬೆಳೆಸುವುದು ಕುಟುಂಬದ ಆರ್ಥಿಕ ಭದ್ರತೆಗೆ ಸಹಕಾರಿ ಎಂದು ತಿಳಿಸಿದರು.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನರೇಗಲ್ಲ ಶಾಖೆ-ಯ ವ್ಯವಸ್ಥಾಪಕ ನರೇಂದ್ರ ಅವರು ಸೈಬರ್ ಅಪರಾಧ ಹಾಗೂ ಆನ್‌ಲೈನ್ ವಂಚನೆಗಳ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು. ಅಪರಿಚಿತ ಲಿಂಕ್‌ಗಳನ್ನು ತೆರೆಯದಿರುವುದು, ಅನುಮಾನಾಸ್ಪದ ಕರೆಗಳಿಗೆ ವೈಯಕ್ತಿಕ ಮಾಹಿತಿಯನ್ನು ನೀಡದಿರುವುದು, ಪಾಸ್‌ವರ್ಡ್, ಎಟಿಎಂ ಹಾಗೂ ಬ್ಯಾಂಕ್ ಖಾತೆಯ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳದಿರುವುದು ಸೇರಿದಂತೆ ಸುರಕ್ಷಿತ ಡಿಜಿಟಲ್ ಬ್ಯಾಂಕಿಂಗ್ ಕ್ರಮಗಳ ಕುರಿತು ವಿವರಿಸಿದರು.

ಎಸ್‌ಬಿಐ ನರೇಗಲ್ಲ ಶಾಖೆಯ ವ್ಯವಸ್ಥಾಪಕ ಮಾಲತೇಶ ಕದಂಬ ಅವರು ಬ್ಯಾಂಕ್‌ಗಳ ಕಾರ್ಯವೈಖರಿ, ಸಾರ್ವಜನಿಕರಿಗೆ ದೊರೆಯುವ ವಿವಿಧ ಸೇವೆಗಳು, ಬ್ಯಾಂಕಿನೊಂದಿಗೆ ಸುರಕ್ಷಿತವಾಗಿ ವ್ಯವಹರಿಸುವ ವಿಧಾನ,



ಉಳಿತಾಯ ಖಾತೆ ತೆರೆಯುವ ಪ್ರಕ್ರಿಯೆ ಹಾಗೂ ಅಗತ್ಯ ದಾಖಲೆಗಳ ಕುರಿತು ಮಾಹಿತಿ ನೀಡಿದರು. ಈಗಾಗಲೇ ಬ್ಯಾಂಕ್ ಖಾತೆ ಹೊಂದಿರುವ ವಿದ್ಯಾರ್ಥಿಗಳು, ಖಾತೆ ಇಲ್ಲದ ಸಹಪಾಠಿಗಳಿಗೂ ಬ್ಯಾಂಕಿಂಗ್ ಸೇವೆಗಳ ಕುರಿತು ಮಾಹಿತಿ ನೀಡುವ ಮೂಲಕ ಅರಿವು ಮೂಡಿಸಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯೆ ಡಾ. ಕಸ್ತೂರಿ ದಳವಾಯಿ ಮಾತನಾಡಿ, ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು ಕಾಲೇಜಿಗೆ ಆಗಮಿಸಿ ವಿದ್ಯಾರ್ಥಿಗಳಿಗೆ ಸರ್ಕಾರದ ಯೋಜನೆಗಳು ಹಾಗೂ ಬ್ಯಾಂಕಿಂಗ್ ಸೇವೆಗಳ ಕುರಿತು ಮಾಹಿತಿ ನೀಡಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಹಣಕಾಸು ಸಾಕ್ಷರತೆ, ಉಳಿತಾಯದ ಮನೋಭಾವ ಹಾಗೂ ಸುರಕ್ಷಿತ ಬ್ಯಾಂಕಿಂ-ಗ್ ಕುರಿತು ಜಾಗೃತಿ ಮೂಡಿಸಲು ಸಹಕಾರಿಯಾಗುತ್ತವೆ ಎಂದರು.

ವೇದಿಕೆಯಲ್ಲಿ ಬ್ಯಾಂಕ್ ಅಧಿಕಾರಿ ಶಿವಕುಮಾರ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

## ಕಟ್ಟಿಗೆಯಲ್ಲಿ ನೈಜ ಬೇಸಾಯದ ಬದುಕು ಅರಳಿಸುತ್ತಿರುವ ಮುತ್ತು ಬ್ಯಾಳಿ

**ಸತ್ಯಮಿಥ್ಯ ಸುದ್ದಿಮೂಲ ಧಾರವಾಡ:**
ಮಣ್ಣಿನೊಂದಿಗೆ ಬೆಸೆದುಕೊಂಡಿರುವ ರೈತನ ಬದುಕು, ಎತ್ತು-ಚಕ್ಕಡಿಯ ಸೊಗಡು ಹಾಗೂ ಸಾಂಪ್ರದಾಯಿಕ ಬೇಸಾಯ ಪದ್ಧತಿಯ ನೈಜತೆಯನ್ನು ಕಟ್ಟಿಗೆಯಲ್ಲಿ ಕಲಾತ್ಮಕವಾಗಿ ಮೂಡಿಸುವ ಮೂಲಕ ಯುವ ಕಲಾವಿದ ಮುತ್ತು ಬ್ಯಾಳಿ ಅವರು ಗಮನ ಸೆಳೆಯುತ್ತಿದ್ದಾರೆ.

ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಮಂಗಳಗಟ್ಟಿ ಗ್ರಾಮದ ಯುವ ಕಲಾವಿದರಾದ ಮುತ್ತು ಬ್ಯಾಳಿ ಅವರು ಕಳೆದ ಎರಡು ವರ್ಷಗಳಿಂದ ಕಟ್ಟಿಗೆಯ ಕಲಾಕೃತಿಗಳ ಮೂಲಕ ಗ್ರಾಮೀಣ ಬದುಕಿನ ಸೊಗಡನ್ನು ಕಲೆಯ ರೂಪದಲ್ಲಿ ಕಟ್ಟಿಕೊಡುತ್ತಿದ್ದಾರೆ. ಕಟ್ಟಿಗೆಯ ತುಂಡುಗಳಿಗೆ ತಮ್ಮ ಸೃಜನಶೀಲ ಸ್ಪರ್ಶ ನೀಡುವ ಅವರು, ಎತ್ತುಗಳು, ಚಕ್ಕಡಿ ಹಾಗೂ ರೈತರು ಬೇಸಾಯ ಮಾಡುವ ದೃಶ್ಯಗಳನ್ನು ಅತ್ಯಂತ ನೈಜವಾಗಿ ಮೂಡಿಸುತ್ತಿದ್ದಾರೆ.

ರೈತನ ಬದುಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಎತ್ತು-ಚಕ್ಕಡಿ ಮತ್ತು ಸಾಂಪ್ರದಾಯಿಕ ಕೃಷಿ ಪದ್ಧತಿಗಳು ಇಂದು ಆಧುನಿಕ ಕೃಷಿ ಯಂತ್ರೋಪಕರಣಗಳ ಭರಾಟೆಯಲ್ಲಿ ನಿಧಾನವಾಗಿ ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಹಳೆಯ ಕಾಲದ ಬೇಸಾಯದ ನೆನಪುಗಳನ್ನು ಕಟ್ಟಿಗೆಯ ಕಲಾಕೃತಿಗಳ ಮೂಲಕ ಉಳಿಸುವ ಮುತ್ತು ಬ್ಯಾಳಿ



ಅವರ ಪ್ರಯತ್ನ ವಿಶೇಷವಾಗಿದೆ.

ಧಾರವಾಡದಲ್ಲಿ ನಡೆದ ಕೃಷಿ ಮೇಳದಲ್ಲಿ ಮುತ್ತು ಬ್ಯಾಳಿ ಅವರು ಪ್ರದರ್ಶಿಸಿದ ಕಟ್ಟಿಗೆಯ ಕಲಾಕೃತಿಗಳು ರೈತರ ಹಾಗೂ ಕಲಾಭಿಮಾನಿಗಳ ಗಮನ ಸೆಳೆದವು. ಕಟ್ಟಿಗೆಯಲ್ಲಿ ಮೂಡಿದ ಎತ್ತು-ಚಕ್ಕಡಿ, ರೈತ ಹಾಗೂ ಬೇಸಾಯದ ದೃಶ್ಯಗಳನ್ನು ಕಂಡು ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ರೈತರು ಮೆಚ್ಚುಗೆ ವ್ಯಕ್ತಪಡಿಸಿದರು.

ಆಧುನಿಕತೆಯ ನಡುವೆ ಸಾಂಪ್ರದಾಯಿಕ ಕೃಷಿ ಬದುಕಿನ ಚಿತ್ರಣವನ್ನು ಕಟ್ಟಿಗೆಯಲ್ಲಿ ಜೀವಂತಗೊಳಿಸಿರುವ ಅವರ ಕಲಾಕೃತಿಗಳು ನೋಡುಗರಲ್ಲಿ ಗ್ರಾಮೀಣ ಬದುಕಿನ ನೆನಪುಗಳನ್ನು ಮೂಡಿಸುತ್ತಿವೆ. ಕೇವಲ ಅಲಂಕಾರಿಕ ವಸ್ತುವಾಗಿ ಅಲ್ಲದೆ, ರೈತನ ಜೀವನಶೈಲಿ ಮತ್ತು ಕೃಷಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲಾಕೃತಿಗಳಾಗಿ ಅವು ಗಮನ ಸೆಳೆಯುತ್ತಿವೆ.

ಮುತ್ತು ಬ್ಯಾಳಿ ಅವರ ಕಲೆಯ ವಿಶೇಷತೆ ಎಂದರೆ ಕಟ್ಟಿಗೆಯ ಸಹಜ ಸ್ವರೂಪವನ್ನು ಉಳಿಸಿಕೊಂಡೇ ಅದರಲ್ಲಿ ವಿವಿಧ ಆಕಾರಗಳಿಗೆ ಜೀವ ತುಂಬುವುದು. ಎತ್ತುಗಳ ದೇಹಭಂಗಿ, ಚಕ್ಕಡಿಯ ವಿನ್ಯಾಸ ಹಾಗೂ ರೈತನ ಬೇಸಾಯದ ದೃಶ್ಯಗಳಲ್ಲಿ ನೈಜತೆಯನ್ನು ಮೂಡಿಸಲು ಅವರು ವಿಶೇಷ ಕಾಳಜಿ ವಹಿಸುತ್ತಾರೆ.

ಕಳೆದ ಎರಡು ವರ್ಷಗಳ ಅವಧಿಯಲ್ಲಿ ತಮ್ಮ ಕಲಾ ಪ್ರತಿಭೆಯನ್ನು ನಿರಂತರವಾಗಿ ಬೆಳೆಸಿಕೊಂಡಿರುವ ಅವರು, ಗ್ರಾಮೀಣ ಜೀವನದ ವಿವಿಧ ಆಯಾಮಗಳನ್ನು ಕಲಾಕೃತಿಗಳಲ್ಲಿ ಸೆರೆಹಿಡಿಯುವ ಮಾಡುತ್ತಿದ್ದಾರೆ.

ಅವರು ತಯಾರಿಸಿರುವ ಕಟ್ಟಿಗೆಯ ಎತ್ತು-ಚಕ್ಕಡಿ ಸೇರಿದಂತೆ ವಿವಿಧ ಕಲಾಕೃತಿಗಳನ್ನು ಜಿಲ್ಲೆಯ ವಿವಿಧ ಭಾಗಗಳ ಜನರು ಖರೀದಿಸಿ ತಮ್ಮ ಮನೆ ಹಾಗೂ ಕಚೇರಿಗಳಲ್ಲಿ ಸಂಗ್ರಹಿಸಿಕೊಂಡಿದ್ದು, ಕಲಾವಿದನ ಕೈಚಳಕಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೃಷಿ ಸಂಸ್ಕೃತಿ, ರೈತನ ಬದುಕು ಹಾಗೂ ಗ್ರಾಮೀಣ ಪರಂಪರೆಯನ್ನು ಕಲೆಯ ಮೂಲಕ ಮುಂದಿನ ಪೀಳಿಗೆಗೆ ಪರಿಚಯಿಸುವ ಮುತ್ತು ಬ್ಯಾಳಿ ಅವರ ಪ್ರಯತ್ನವು ನಾಡಿನ ಜನಪದ ಕಲಾ ಪರಂಪರೆಗೆ ಹೊಸ ಆಯಾಮ ನೀಡುವಂತಾಗಿದೆ.

# ಗದಗ–ಬೆಟಗೇರಿ ನಗರಸಭೆ ಕಚೇರಿ ಮುತ್ತಿಗೆ ಹಾಕಲು ಬಿಜೆಪಿ ಕಾರ್ಯಕರ್ತರ ಯತ್ನ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಗದಗ–ಬೆಟಗೇರಿ ಅವಳಿ ನಗರಕ್ಕೆ ಸಮರ್ಪಕವಾಗಿ ನೀರು ಪೂರೈಕೆ ಮಾಡುವಂತೆ ಆಗ್ರಹಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಗದಗ–ಬೆಟಗೇರಿ ನಗರಸಭೆ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಮಹಾತ್ಮ ಗಾಂಧಿ ವೃತ್ತದಲ್ಲಿ ಎರಡು ತಾಸು ಪ್ರತಿಭಟನೆ ನಡೆಸಿದ ಬಳಿಕ ನಗರಸಭೆ ಕಚೇರಿಯತ್ತ ನುಗ್ಗಿದರು.

ಮುಂಜಾಗ್ರತಾ ಕ್ರಮವಾಗಿ ಪೊಲೀಸರು, ಕಚೇರಿಯ ಗೇಟ್ ಬಂದ್ ಮಾಡಿ, ಬ್ಯಾರಿಕೇಡ್ ಅಳವಡಿಸಿದ್ದರು.

ಪೊಲೀಸರನ್ನೂ ನೂಕಿ, ಬ್ಯಾರಿಕೇಡ್ ಉರುಳಿಸಿದ ಬಿಜೆಪಿಗರು ನಗರಸಭೆ ಕಚೇರಿಯ ಗೇಟ್ ಹತ್ತಿ ಒಳನುಗ್ಗಲು ಯತ್ನಿಸಿದರು. ಈ ವೇಳೆ ವಾಗ್ವಾದ, ನೂಕಾಟ ಉಂಟಾಯಿತು.

ಬಳಿಕ, ಪಕ್ಷದ ಮುಖಂಡರ ಸೂಚನೆ ಮೇರೆಗೆ ಹಿಂದೆ ಸರಿದರು. ಜಿಲ್ಲಾಧಿಕಾರಿ ಅವರು ಪ್ರತಿಭಟನಕಾರರು ಇದ್ದ ಕಡೆ ಬಂದು ಮನವಿ ಸ್ವೀಕರಿಸಿದರು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ, ಯಾವುದೇ ಭರವಸೆ ನೀಡಲಾಗದು ಎಂದು ತಿಳಿಸಿದರು.

ಒಂದು ವಾರದಲ್ಲಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದಲ್ಲಿ ಹೋರಾಟ ಮುಂದುವರಿಸಲಾಗುವುದು ಎಂಬ ಎಚ್ಚರಿಕೆ ನೀಡಲಾಯಿತು.



# ನಾಪತ್ತೆಯಾಗಿದ್ದ ಗದಗ ಕೆಆರ್‌ಐಡಿಎಲ್ ಎಇಇ ಪರ್ವೇಜ್ ಭೋಪಾಲ್ ರೈಲ್ವೆ ನಿಲ್ದಾಣದಲ್ಲಿ ಪತ್ತೆ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಕಳೆದ ಕೆಲವು ದಿನಗಳಿಂದ ನಾಪತ್ತೆಯಾಗಿದ್ದ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
(ಕೆಆರ ಐಡಿಎಲ್) ಉಪ ವಿಭಾಗದ ಸಹಾಯಕ ಕಾರ್ಯಪಾಲಕಅಭಿಯಂತರ(ಎಇಇ)ಪರ್ವೇಜ್ ಧಾರವಾಡ ಅವರನ್ನು ಗದಗ ಪೊಲೀಸರು ಭೋಪಾಲ್ ರೈಲ್ವೆ ನಿಲ್ದಾಣದಲ್ಲಿ ಪತ್ತೆಹಚ್ಚಿದ್ದಾರೆ.





ಭೋಪಾಲ್ ರೈಲ್ವೆ ನಿಲ್ದಾಣದಲ್ಲಿ ಪರ್ವೇಜ್ ಅವರು ಪತ್ತೆಯಾಗಿದ್ದು, ಅವರು ರೈಲ್ವೆ ನಿಲ್ದಾಣದಲ್ಲಿ ಓಡಾಡುತ್ತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ ಎನ್ನಲಾಗಿದೆ. ಸಿಸಿಟಿವಿ ದೃಶ್ಯಗಳ ಆಧಾರದ ಮೇಲೆ ಪೊಲೀಸರು ಅವರನ್ನು ಪತ್ತೆಹಚ್ಚಿ ಗದಗಕ್ಕೆ ಕರೆತರಲು ಮುಂದಾಗಿದ್ದಾರೆ.

ಪರ್ವೇಜ್ ನಾಪತ್ತೆಯಾಗಿದ್ದ ಪ್ರಕರಣ ಗದಗ ಪೊಲೀಸರಿಗೆ ಸವಾಲಾಗಿತ್ತು. ಅವರು ಮೊಬೈಲ್ ಫೋನ್ ಬಳಸದೇ ಇರುವುದರ ಜೊತೆಗೆ ಆನ್‌ಲೈನ್ ಬ್ಯಾಂಕಿಂಗ್ ವ್ಯವಹಾರವನ್ನೂ ನಡೆಸದೇ ಇದ್ದ ಹಿನ್ನೆಲೆಯಲ್ಲಿ ಅವರ ಚಲನವಲನಗಳ ಬಗ್ಗೆ ಸುಳಿವು ಪತ್ತೆಹಚ್ಚುವುದು ಪೊಲೀಸರಿಗೆ ಕಷ್ಟವಾಗಿತ್ತು. ಈ ಹಿನ್ನೆಲೆಯಲ್ಲಿ ಸಿಸಿಟಿವಿ ದೃಶ್ಯಗಳು ಹಾಗೂ ಇತರ ಮಾರ್ಗಗಳ ಮೂಲಕ ಪೊಲೀಸರು ತನಿಖೆ ಮುಂದುವರಿಸಿದ್ದರು.

ಸರ್ಕಾರದಿಂದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗದಹಿನ್ನೆಲೆಯಲ್ಲಿಗುತ್ತಿಗೆದಾರರಿಂದ ತಮ್ಮ ಹಾಗೂ ಕುಟುಂಬದ ಮೇಲೆ ಹಣಕ್ಕಾಗಿ ಒತ್ತಡ ಮತ್ತು ಕಿರುಕುಳ ನೀಡಲಾಗುತ್ತಿದೆ ಎಂದು ಪರ್ವೇಜ್ ಅವರು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿ ನಾಪತ್ತೆಯಾಗಿರಬಹುದು ಎಂಬ ಹಲವು ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದರು. ಪರ್ವೇಜ್ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗದಗ–ಬೆಟಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಐದು ವಿಶೇಷ ಪೊಲೀಸ್ ತಂಡಗಳನ್ನು ರಚಿಸಿ ವಿವಿಧ ಸ್ಥಳಗಳಲ್ಲಿ ತೀವ್ರ ಶೋಧ ಕಾರ್ಯ ನಡೆಸಲಾಗಿತ್ತು.

ಮೊಬೈಲ್ ಹಾಗೂ ಬ್ಯಾಂಕಿಂಗ್ ವ್ಯವಹಾರಗಳ ಮೂಲಕ ಯಾವುದೇ ಸುಳಿವು ಲಭ್ಯವಾಗದ ಹಿನ್ನೆಲೆಯಲ್ಲಿ ರೈಲ್ವೆ ಸೇರಿದಂತೆ ವಿವಿಧ ಮಾರ್ಗಗಳಲ್ಲಿ ಪೊಲೀಸರು ತನಿಖೆ ನಡೆಸಿದ್ದರು. ಇದೀಗ ಭೋಪಾಲ್ ರೈಲ್ವೆ ನಿಲ್ದಾಣದಲ್ಲಿ ಪರ್ವೇಜ್ ಪತ್ತೆಯಾಗಿರುವುದು ಪ್ರಕರಣಕ್ಕೆ ಮಹತ್ವದ ತಿರುವು ನೀಡಿದೆ. ಅವರನ್ನು ಗದಗಕ್ಕೆ ಕರೆತಂದ ಬಳಿಕ ನಾಪತ್ತೆಯಾಗಿದ್ದ ಕಾರಣ ಹಾಗೂ ಪ್ರಕರಣದ ಇತರೆ ಅಂಶಗಳ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗುವ ನಿರೀಕ್ಷೆಯಿದೆ.

# ರಸ್ತೆಯೋ– ಕೆಸರುಗದ್ದೆಯೋ? ಮಳೆ ಬಂದರೆ ನರೇಗಲ್ಲ–ಅಬ್ಬಿಗೇರಿ ಮಾರ್ಗ ದುಸ್ಥಿತಿ

## ತುಸು ಮಳೆ ಬಂದ್ರ ಸಾಕು_ ರಸ್ತೆ ತುಂಬ ನೀರು; ವಿದ್ಯಾರ್ಥಿ, ಬೈಕ್ ಸವಾರರ ಪರದಾಟ

**ಸಂಗಮೇಶ ಮೆಣಸಗಿ, ಜಕ್ಕಲಿ**
ಊರೊಳಗಿನ ರಸ್ತೆ ಅಂದರೆ ಜನರ ಸುಗಮ ಸಂಚಾರಕ್ಕೆ ಅನುಕೂಲವಾಗಬೇಕು. ಆದರೆ ನರೇಗಲ್ಲ ರೈತ ಸಂಪರ್ಕ ಕೇಂದ್ರದಿಂದ ಶ್ರೀ ಅನ್ನದಾನೇಶ್ವರ ಕಾಲೋನಿವರೆಗಿನ ಜೋಡು ರಸ್ತೆಯ ಅವಸ್ಥೆ ನೋಡಿದರೆ, 'ಇದು ರಸ್ತೆಯೋ ಕೆಸರುಗದ್ದೆಯೋ?' ಎಂಬ ಪ್ರಶ್ನೆ ಸಾರ್ವಜನಿಕರ ಬಾಯಲ್ಲಿ ಮೂಡುತ್ತಿದೆ.

ತುಸು ಮಳೆ ಬಂದ್ರೆ ಸಾಕು. ರಸ್ತೆಯ ಮೇಲೆ ನೀರು ಹರಿಯುತ್ತದೆ, ತಗ್ಗು–ದಿಣ್ಣೆಗಳಲ್ಲಿ ನೀರು ನಿಲ್ಲುತ್ತದೆ. ಕೆಲವೆಡೆ ರಸ್ತೆ ಕೆಸರುಗದ್ದೆಯಂತಾಗುತ್ತದೆ. ಪರಿಣಾಮ ಬೈಕ್ ಸವಾರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಅಪಾಯದ ನಡುವೆ ಸಂಚರಿಸುವಂತಾಗಿದೆ.

ರೈತ ಸಂಪರ್ಕ ಕೇಂದ್ರದಿಂದ ಪೆಟ್ರೋಲ್ ಬಂಕ್‌ವರೆಗಿನ ರಸ್ತೆಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲ. ಹೀಗಾಗಿ ಆಕಾಶದಿಂದ ಬಿದ್ದ ನೀರಿಗೆ ದಾರಿ ಇಲ್ಲದೆ ರಸ್ತೆಯ ಮೇಲೆಯೇ ನಿಲ್ಲುತ್ತಿದೆ. ನೀರು ನಿಂತಾಗ ರಸ್ತೆ ಎಲ್ಲಿ, ಗುಂಡಿ ಎಲ್ಲಿ ಎಂಬುದೇ ಗೊತ್ತಾಗದ ಸ್ಥಿತಿ ನಿರ್ಮಾಣವಾಗುತ್ತಿದೆ.

ಪೆಟ್ರೋಲ್ ಬಂಕ್ ಸಮೀಪದ ಎಡಭಾಗದಲ್ಲಿ ಮಳೆ ನೀರು ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾಗುತ್ತಿದ್ದು, ನೀರಿನ ಅಡಿಯಲ್ಲಿರುವ ತಗ್ಗು–ದಿಣ್ಣೆಗಳು ವಾಹನ ಸವಾರರಿಗೆ ಕಾಣಿಸುವುದಿಲ್ಲ. ಸ್ವಲ್ಪ ಎಚ್ಚರ ತಪ್ಪಿದರೂ ಬೈಕ್ ಸಮೇತ ಬಿದ್ದು ಗಾಯಗೊಳ್ಳುವ ಅಪಾಯ ಎದುರಾಗಿದೆ.

ಸ್ಥಳೀಯರ ಪ್ರಕಾರ, ಈಗಾಗಲೇ ಹಲವರು ಈ ರಸ್ತೆಯಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಕೈಕಾಲು ಮುರಿದ ಘಟನೆಗಳೂ ನಡೆದಿವೆ ಎನ್ನಲಾಗಿದೆ.

ಇತ್ತೀಚೆಗೆ ರಸ್ತೆಯಲ್ಲಿ ನಿಂತಿದ್ದ ನೀರನ್ನು ತಪ್ಪಿಸಿಕೊಂಡು ಹೋಗುತ್ತಿದ್ದ ಬೈಕ್ ಸವಾರನೊಬ್ಬ ನಡೆದುಕೊಂಡು ಹೋಗುತ್ತಿದ್ದ ವಿದ್ಯಾರ್ಥಿನಿಗೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿನಿಗೆ ಗಾಯವಾಗಿತ್ತು. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಇಂತಹ ಘಟನೆಗಳು ಮರುಕಳಿಸುತ್ತಿದ್ದರೂ ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಳ್ಳದಿರುವ ಬಗ್ಗೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ವಿದ್ಯಾರ್ಥಿಗಳ ಸಂಚಾರ ಹೆಚ್ಚಿರುವ ರಸ್ತೆ:** ಈ ರಸ್ತೆಯುದ್ದಕ್ಕೂ ಶ್ರೀ ಅನ್ನದಾನೇಶ್ವರ ಮಠದ ವ್ಯಾಪ್ತಿಯ ಹಲವು ಶಿಕ್ಷಣ ಸಂಸ್ಥೆಗಳಿವೆ. ಪಿಎಸ್‌ಎಸ್ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಸರ್ಕಾರಿ ಪ್ರೌಢಶಾಲೆ, ಪಿಯು ಕಾಲೇಜು, ಪದವಿ ಕಾಲೇಜು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳಿಗೆ ಪ್ರತಿದಿನ ವಿದ್ಯಾರ್ಥಿಗಳು ಇದೇ ರಸ್ತೆಯಲ್ಲಿ ಸಂಚರಿಸುತ್ತಾರೆ. ಅಬ್ಬಿಗೇರಿ,ರೋಣ,ಕೋಚಲಾಪುರ,ಯರೆಬೇಲೇರಿ,ಕುರುಡಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದಲೂ ನೂರಾರು ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ಬರುತ್ತಾರೆ.



ಮಳೆ ನೀರು ನಿಂತಿರುವ ಸಂದರ್ಭದಲ್ಲಿ ಬಸ್, ಕಾರು ಅಥವಾ ಬೈಕ್‌ಗಳು ವೇಗವಾಗಿ ಸಾಗಿದರೆ ಕೆಸರು ನೀರು ವಿದ್ಯಾರ್ಥಿಗಳ ಮೇಲೆ ಎರಚುತ್ತದೆ. ಬಟ್ಟೆ,ಪುಸ್ತಕಗಳು ಒದ್ದೆಯಾಗುವುದು ಒಂದೆಡೆಯಾದರೆ, ನೀರಿನೊಳಗಿನ ಗುಂಡಿ–ತಗ್ಗುಗಳಿಂದ ಅಪಘಾತದ ಭಯ ಮತ್ತೊಂದೆಡೆ.

'ನೀರು ಕಡಿಮೆಯಾಗಲಿ ಎಂದು ಕಾಯ್ದರೆ ತರಗತಿ ತಪ್ಪುತ್ತದೆ; ದಾಟಿ–ಕೊಂಡು ಹೋದರೆ ಬಿದ್ದು ಗಾಯವಾಗುವ ಭಯ' ಎನ್ನುವಂತಾಗಿದೆ ವಿದ್ಯಾರ್ಥಿಗಳ ಪರಿಸ್ಥಿತಿ.

**ಗರಸು ಹಾಕುವುದಷ್ಟೇ ಪರಿಹಾರವಲ್ಲ:** ರಸ್ತೆ ನಿರ್ಮಿಸುವಾಗಲೇ ಮಳೆ ನೀರು ಯಾವ ದಿಕ್ಕಿನಲ್ಲಿ ಹರಿಯಬೇಕು ಎಂಬುದನ್ನು ಪರಿಗಣಿಸಿ ಚರಂಡಿ ವ್ಯವಸ್ಥೆ ಕಲ್ಪಿಸಬೇಕಿತ್ತು. ಆದರೆ ಸಮರ್ಪಕ ನೀರು ಹರಿಯುವ ವ್ಯವಸ್ಥೆ ಇಲ್ಲದಿರುವುದರಿಂದ ಪ್ರತಿಯೊಂದು ಮಳೆಯಲ್ಲೂ ಇದೇ ಸಮಸ್ಯೆ ಮರುಕಳಿಸುತ್ತಿದೆ ಎಂಬುದು ಸ್ಥಳೀಯರ ಆರೋಪ.

ಮಳೆ ನಿಂತ ಬಳಿಕವೂ ರಸ್ತೆ ಮೇಲಿನ ನೀರು ಬೇಗ ಇಳಿಯುವುದಿಲ್ಲ. ವಾಹನಗಳ ಸಂಚಾರದಿಂದ ಕೆಸರು ಮತ್ತಷ್ಟು ಹರಡಿ ರಸ್ತೆ ಹಾಳಾಗುತ್ತದೆ. ಬಳಿಕ ಗರಸು ಹಾಕಲಾಗುತ್ತದೆ. ಮುಂದಿನ ಮಳೆ ಬಂದಾಗ ಮತ್ತೆ ಅದೇ ಪರಿಸ್ಥಿತಿ ನಿರ್ಮಾಣವಾಗುತ್ತದೆ.

'ಗರಸು ಹಾಕಿದರೆ ರಸ್ತೆ ಸರಿಯಾಗುವುದಿಲ್ಲ; ನೀರು ಹೋಗುವ ದಾರಿ ಮಾಡಿದಾಗ ಮಾತ್ರ ಸಮಸ್ಯೆ ಬಗೆಹರಿಯುತ್ತದೆ' ಎಂಬುದು ಸ್ಥಳೀಯರ ಅಭಿಪ್ರಾಯ.

ಈ ಮಾರ್ಗದಲ್ಲಿ ಸಣ್ಣಪುಟ್ಟ ಅಪಘಾತಗಳು ಆಗಾಗ ನಡೆಯುತ್ತಿವೆ. ಇತ್ತೀಚೆಗೆ ಬೈಕ್ ಸವಾರನೊಬ್ಬ ಅಪಘಾತದಲ್ಲಿ ಮೃತಪಟ್ಟ ಘಟನೆಯನ್ನೂ ಸಾರ್ವಜನಿಕರು ನೆನಪಿಸುತ್ತಿದ್ದಾರೆ.

ಅಪಘಾತ ಸಂಭವಿಸಿದ ಬಳಿಕ ತಾತ್ಕಾಲಿಕವಾಗಿ ಗರಸು ಹಾಕಿ ಕೈತೊಳೆದುಕೊಳ್ಳುವುದಕ್ಕಿಂತ, ಮಳೆ ನೀರು ನಿಲ್ಲದಂತೆ ಶಾಶ್ವತ ಚರಂಡಿ ವ್ಯವಸ್ಥೆ ಕಲ್ಪಿಸಬೇಕು. ತಗ್ಗು–ದಿಣ್ಣೆಗಳನ್ನು ಸಮತಟ್ಟು ಮಾಡಿ ರಸ್ತೆ ದುರಸ್ತಿ ಮಾಡಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

**ಅಧಿಕಾರಿಗಳ ಸ್ಪಂದನೆ:** ನರೇಗಲ್ಲ ಪಟ್ಟಣದ ದ್ವಿಪಥ ರಸ್ತೆಯಲ್ಲಿ ಮಳೆ ನೀರು ನಿಲ್ಲುತ್ತಿರುವ ಕುರಿತು ದೂರುಗಳು ಬಂದಿವೆ. ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಲೋಕೋಪಯೋಗಿ ಇಲಾಖೆಯ ರೋಣ ವಿಭಾಗದ ಎಇಇ ಜಿ.ಎಸ್. ಪಾಟೀಲ ತಿಳಿಸಿದ್ದಾರೆ.

**'ಪ್ರತಿ ಮಳೆಗಾಲಕ್ಕೂ ಇದೇ ಗೋಳು ಅಂದರೆ, ಶಾಶ್ವತ ಪರಿಹಾರ ಯಾವಾಗ?'**
ನರೇಗಲ್ಲ–ಅಬ್ಬಿಗೇರಿ ಮಾರ್ಗವು ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ನಿತ್ಯದ ಪ್ರಮುಖ ಸಂಪರ್ಕ ರಸ್ತೆಯಾಗಿದೆ. ವಿದ್ಯಾರ್ಥಿಗಳು, ರೈತರು, ವ್ಯಾಪಾರಿಗಳು, ಉದ್ಯೋಗಿಗಳು ಹಾಗೂ ವಾಹನ ಸವಾರರು ಪ್ರತಿದಿನ ಈ ರಸ್ತೆಯನ್ನು ಬಳಸುತ್ತಾರೆ.

ಹೀಗಾಗಿ ಮಳೆ ಬಂದಾಗ ರಸ್ತೆ ಕೆರೆಯಾಗುವುದು, ಕೆಸರುಗದ್ದೆಯಂತಾಗುವುದು ಹಾಗೂ ಅಪಘಾತದ ಆತಂಕ ಎದುರಾಗುವುದು ಸಾಮಾನ್ಯವಾಗಬಾರದು. ಸಮರ್ಪಕ ಚರಂಡಿ ನಿರ್ಮಿಸಿ ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು, ಹಾಳಾದ ರಸ್ತೆ ದುರಸ್ತಿ ಮಾಡಬೇಕು ಹಾಗೂ ಅಪಾಯಕಾರಿ ತಗ್ಗು–ದಿಣ್ಣೆಗಳನ್ನು ಸರಿಪಡಿಸಬೇಕು ಎಂಬುದು ಸ್ಥಳೀಯರ ಆಗ್ರಹ.

ಇಲ್ಲವಾದರೆ ಪ್ರತಿಯೊಂದು ಮಳೆಗಾಲದಲ್ಲೂ ಜನರ ಪ್ರಶ್ನೆ ಮತ್ತೆ ಮತ್ತೆ ಕೇಳಿಬರುತ್ತಲೇ ಇರುತ್ತದೆ.

### 'ರಸ್ತೆಯೋ, ಕೆಸರುಗದ್ದೆಯೋ?'

**"ರಸ್ತೆ ಸಂಪೂರ್ಣ ಅವೈಜ್ಞಾನಿಕವಾಗಿ ಮಾಡಿರುವಂತೆ ಕಾಣುತ್ತಿದೆ. ಇತ್ತೀಚೆಗೆ ಬೈಕ್ ಸವಾರನೊಬ್ಬ ಅಪಘಾತದಲ್ಲಿ ಮೃತಪಟ್ಟಿದ್ದಾನೆ. ಜನರು ಗಲಾಟೆ ಮಾಡಿದಾಗ ಗರಸು ಹಾಕಿ ಕೈತೊಳೆದುಕೊಂಡಿದ್ದಾರೆ. ನಮಗೆ ತಾತ್ಕಾಲಿಕ ಕೆಲಸ ಬೇಡ; ಶಾಶ್ವತ ಪರಿಹಾರ ಬೇಕು."**

**। ಸಂತೋಷ ಮಣ್ಣೋಡ್ಡರ್, ಅಧ್ಯಕ್ಷರು, ಚಂದ್ರಮೌಳೇಶ್ವರ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘ, ನರೇಗಲ್ಲ**

"ನರೇಗಲ್ಲ ಪಟ್ಟಣದ ದ್ವಿಪಥ ರಸ್ತೆಯಲ್ಲಿ ಮಳೆ ನೀರು ನಿಲ್ಲುತ್ತಿರುವ ಬಗ್ಗೆ ದೂರುಗಳು ಬಂದಿವೆ. ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು."

**। ಜಿ.ಎಸ್. ಪಾಟೀಲ, ಎಇಇ, ಲೋಕೋಪಯೋಗಿ ಇಲಾಖೆ, ರೋಣ**

# ಹಿಂಗಾರು ಕೃಷಿಗೆ ಚಿಗುರಿದ ಆಸೆ; ಕಡಲೆ ಬೀಜ ವಿತರಣೆಗೆ ಚಾಲನೆ

## ಕಪ್ಪು ಮಣ್ಣಿನ ಹೊಲಗಳಲ್ಲಿ ಮತ್ತೆ ಕೃಷಿಯ ಚಟುವಟಿಕೆ; ರಿಯಾಯಿತಿ ದರದಲ್ಲಿ ಸುಧಾರಿತ ಕಡಲೆ ಬೀಜ ರೈತರ ಕೈಗೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಮಳೆ ಬಂದು ಭೂಮಿಯ ಒಡಲು ತೇವಗೊಂಡ ಬೆನ್ನಲ್ಲೇ ಕಪ್ಪು ಮಣ್ಣಿನ ಹೊಲಗಳು ಹಿಂಗಾರು ಕೃಷಿಗೆ ಸಜ್ಜಾಗುತ್ತಿವೆ. ಬಿರುಬೇಸಿಗೆಯ ಬಿಸಿಲು, ಮಳೆಯ ಏರಿಳಿತಗಳ ನಡುವೆ ಬೆಳೆಗಾಗಿ ಕಾಯುತ್ತಿದ್ದ ರೈತನ ಕಣ್ಣಲ್ಲಿ ಇದೀಗ ಮತ್ತೆ ಹೊಸ ನಿರೀಕ್ಷೆ ಚಿಗುರಿದೆ. ಈ ನಿರೀಕ್ಷೆಗೆ ಮತ್ತಷ್ಟು ಬಲ ತುಂಬುವಂತೆ ಕೃಷಿ ಇಲಾಖೆಯು 202627ನೇ ಸಾಲಿನ ಹಿಂಗಾರು ಹಂಗಾಮಿಗೆ ಅಗತ್ಯವಿರುವ ರಿಯಾಯಿತಿ ದರದ ಸುಧಾರಿತ ಕಡಲೆ ಬಿತ್ತನೆ ಬೀಜಗಳ ವಿತರಣೆಗೆ ನರೇಗಲ್ಲ ರೈತ ಸಂಪರ್ಕ ಕೇಂದ್ರದಲ್ಲಿ ಚಾಲನೆ ನೀಡಿದೆ.

ನರೇಗಲ್ಲ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಕಪ್ಪು ಮಣ್ಣಿನ ಪ್ರದೇಶಗಳಲ್ಲಿ ಕಡಲೆ ಪ್ರಮುಖ ಒಣಬೇಸಾಯ ಬೆಳೆಯಾಗಿದೆ. ಹೀಗಾಗಿ ಬಿತ್ತನೆ ಸಮಯಕ್ಕೆ ಗುಣಮಟ್ಟದ ಬೀಜ ರೈತರ ಕೈ ಸೇರಿಸುವುದು ಉತ್ತಮ ಇಳುವರಿಗೆ ಮೊದಲ ಹೆಜ್ಜೆಯಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಕೃಷಿ ಇಲಾಖೆ ರೈತರಿಗೆ ರಿಯಾಯಿತಿ ದರದಲ್ಲಿ ಪ್ರಮಾಣೀಕೃತ ಬೀಜ ಒದಗಿಸುವ ವ್ಯವಸ್ಥೆ ಮಾಡಿದೆ.



ಉಪ ಕೃಷಿ ನಿರ್ದೇಶಕ ಜಯಪ್ರಕಾಶ ಮಾತನಾಡಿ, ಸರ್ಕಾರದ ರಿಯಾಯಿತಿ ದರದಲ್ಲಿ ರೈತರಿಗೆ ಪ್ರಮಾಣೀಕೃತ ಕಡಲೆ ಬೀಜಗಳನ್ನು ವಿತರಿಸಲಾಗುತ್ತಿದೆ. ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಹಿಂಗಾರು ಕೃಷಿಯಲ್ಲಿ ಉತ್ತಮ ಇಳುವರಿ ಪಡೆಯಬೇಕು ಎಂದು ಮನವಿ ಮಾಡಿದರು.

ಬೀಜ ಪಡೆಯಲು ರೈತರು ಇತ್ತೀಚಿನ ಪಹಣಿ (ಆರ್‌ಟಿಸಿ), ಆಧಾರ್ ಕಾರ್ಡ್ ಪ್ರತಿ, ಫ್ರೂಟ್ಸ್ ಐಡಿ (ಈಖಆ) ಹಾಗೂ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಬೇಕು ಎಂದು ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕ ಬಸವರಾಜ ಮಾಳೆದ ಮಾತನಾಡಿ, ಕಡಲೆ ಬಿತ್ತನೆಗೂ ಮುನ್ನ ರೈತರು ಕಡ್ಡಾಯವಾಗಿ ಬೀಜೋಪಚಾರ ಮಾಡಬೇಕು. ಬೀಜೋಪಚಾರದಿಂದ ಆರಂಭಿಕ ಹಂತದಲ್ಲಿ ಕಾಣಿಸಿಕೊಳ್ಳುವ ಸಸಿ ಒಣಗುವ ರೋಗ ಹಾಗೂ ಶಿಲೀಂಧ್ರ ಬಾಧೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಇದರಿಂದ ಆರೋಗ್ಯಕರ ಸಸಿಗಳು ಬೆಳೆದು ಉತ್ತಮ ಇಳುವರಿ ಪಡೆಯಲು ನೆರವಾಗುತ್ತದೆ ಎಂದು ಸಲಹೆ ನೀಡಿದರು.

ಕೃಷಿ ನಿರ್ದೇಶಕ ಬಸವರಾಜ ಗದುಗಿನ ಮಾತನಾಡಿ, ಬೀಜ ಪಡೆಯಲು ಆಗಮಿಸುವ ರೈತರು ಯಾವುದೇ ರೀತಿಯ ಆತುರಕ್ಕೆ ಒಳಗಾಗದೆ ಶಾಂತಿಯುತವಾಗಿ ಸರದಿ ಸಾಲಿನಲ್ಲಿ ನಿಂತು, ಇಲಾಖೆಯ ನಿಯಮಾವಳಿಗಳಂತೆ ಬೀಜ ಪಡೆದುಕೊಳ್ಳಬೇಕು. ಹಿಂಗಾರು ಹಂಗಾಮು ಯಶಸ್ವಿಯಾಗಲು ಕೃಷಿ ಇಲಾಖೆಯ ಮಾರ್ಗದರ್ಶನ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ರೈತರು ಪಾಲಿಸಬೇಕು ಎಂದು ಮನವಿ ಮಾಡಿದರು.

ಮಳೆಗಾಗಿ ಆಕಾಶದತ್ತ ನೋಡಿದ ಕಣ್ಣುಗಳು, ಇದೀಗ ಮೊಳಕೆಯೊಡೆಯುವ ಬೀಜದತ್ತ ನೆಟ್ಟಿವೆ. ರೈತನ ಬೆವರು, ಭೂಮಿಯ ತೇವ ಹಾಗೂ ಉತ್ತಮ ಬೀಜ ಒಂದಾದಾಗಲೇ ಹೊಲದಲ್ಲಿ ಸಮೃದ್ಧಿಯ ಹಸಿರು ಮೂಡಲಿದೆ. ಹೀಗಾಗಿ ಹಿಂಗಾರು ಹಂಗಾಮು ರೈತರ ಬದುಕಿನಲ್ಲಿ ಮತ್ತೊಮ್ಮೆ ಭರವಸೆಯ ಬೆಳಕಾಗಲಿ ಎಂಬ ಆಶಯ ಈ ಸಂದರ್ಭದಲ್ಲಿ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಶರಣಪ್ಪ ಧರ್ಮಾಯತ, ಆನಂದ ಕೊಂಡಿ, ಶಿವನಗೌಡ ಕರದಳ್ಳಿ, ಚಂದ್ರು ವನವಾಡ, ಮಲ್ಲನಗೌಡ ಪಾಟೀಲ, ನಜೀರಹಮ್ಮದ್ ಹದ್ಲಿ, ಕಳಕಪ್ಪ ರೋಣದ ಸೇರಿದಂತೆ ರೈತರು ಹಾಗೂ ಕೃಷಿ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.




**"ಗಾಂಧಿ ನೀ ಸತ್ಯದ ತೇರು**
**ಪ್ರಾಮಾಣಿಕತೆಗೆ ಇಲ್ಲ ಸಮನಾರು**
**ಸತ್ಯಾಸತ್ಯತೆಗಳ ಸತತ ಶೋಧಕ**
**ತ್ಯಾಗ ಅಹಿಂಸೆಗಳ ಧ್ಯೋತಕ"**

ಹೀಗೆ ಗಾಂಧೀಜಿಯವರ ಸತ್ಯ, ಪ್ರಾಮಾಣಿಕತೆ, ದೇಶಭಕ್ತಿ, ಅಹಿಂಸೆ, ಸ್ವದೇಶ ಪ್ರೇಮ, ಸ್ವಾತಂತ್ರ್ಯ ಇವೆಲ್ಲವುಗಳ ಕುರಿತು ಹೇಳುತ್ತಾ ಹೋದರೆ ಒಂದು ಜನ್ಮವೂ ಸಾಕಾಗದು "ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎಂಬ ಗಾದೆಗೆ ಅವರೇನು ಹೊರತಾಗಿರಲಿಲ್ಲ. ಗಾಂಧೀಜಿ ಬಾಲ್ಯದಲ್ಲಿದ್ದಾಗ ಕಳ್ಳತನವನ್ನೂ ಮಾಡಿದ್ದಾರೆ. ಆದರೆ ಅವರು ನೋಡಿದ ಎರಡು ನಾಟಕಗಳು ಅವರ ಮನಸಿನ ಮೇಲೆ ಅಗಾಧ ಪರಿಣಾಮ ಬೀರಿದವು.

ಎಳೆ ಮನದಲಿರದ ಆಸೆಗಳಿಲ್ಲ
ಭವ್ಯ ಭಾರತದ ನಿರ್ಮಾತೃಕೆಗಳವು..

ವಯೋ ಸಹಜ ತಪ್ಪುಗಳು, ಪ್ರಮಾದಗಳಲ್ಲ ಆದರೆ ಮುಂದು ವರೆದರೆ ಅಪರಾಧವಾಗಿ ಪರಿಣಮಿಸಬಹುದು. ಆತ್ಮವಿಮರ್ಶೆಯಂತಹ ಗುರು ಬದುಕಿಗೆ ಮತ್ತೊಂದಿಲ್ಲ.

ಸತ್ಯ ಹರಿಶ್ಚಂದ್ರ ಮತ್ತು ಶ್ರವಣಕುಮಾರನ ಪಿತೃಭಕ್ತಿ ಎಂಬ ಎರಡು ನಾಟಕಗಳು ಅವರ ಬದುಕಿಗೆ ಹಾಕಿಕೊಟ್ಟ ಭದ್ರ ಬುನಾದಿಗಳು ಎಂದರೆ ತಪ್ಪಾಗಲಾರದಾದೀತು. ಬಾಲ್ಯದಲ್ಲಿದ್ದಾಗ ತಾಯಿ ತನ್ನ ಮಗು ನೆರೆಮನೆಯ ಹಣ, ಬೆಲೆ ಬಾಳುವ ವಸ್ತುಗಳನ್ನು ತಂದು ಕೊಡುತ್ತಿರುವಾಗ ತಾಯಿ ಮಗನಿಗೆ ಷಹಬ್ಬಾಷ್ ಎಂದು ಖುಷಿಪಟ್ಟು ಅವನ ಬೆನ್ನು ತಟ್ಟಿದಳು. ಓಹೋ ನನ್ನ ಅಮ್ಮನಿಗೆ ಇದರಿಂದ ಸಂತೋಷ ಸಿಕ್ಕಿದೆ ಎಂದು ತಿಳಿದ ಆ ಮಗು ನಿತ್ಯ ವಸ್ತುಗಳನ್ನು ಕದ್ದು ತರಲಾರಂಭಿಸಿದ. ತಾಯಿ ಪ್ರೋತ್ಸಾಹಿಸುತ್ತಲೆ ಬಂದಳು. ದೊಡ್ಡವನಾದ ನಂತರ ಬ್ಯಾಂಕ್, ದೇವಾಲಯಗಳನ್ನ ಲೂಟಿ ಹೊಡೆಯುತ್ತಾ ಒಂದು ದಿವಸ ಪೋಲಿಸರ ಸೆರೆಯಾಗುತ್ತಾನೆ. ಹಲವಾರು ವಿಚಾರಣೆಗಳ ನಂತರ ಅವನಿಗೆ ಗಲ್ಲು ಶಿಕ್ಷೆಯಾಗುತ್ತದೆ. ಆ ಸಂದರ್ಭದಲ್ಲಿ ಅವನ ಅಂತಿಮ ಇಚ್ಛೆ ಏನು ಎಂದು ಜೈಲರ್ ಕೇಳಿದಾಗ ಆತ ಹೇಳುತ್ತಾನೆ ಮೊದಲು ನನ್ನ ತಾಯಿಗೆ ಗಲ್ಲು ಶಿಕ್ಷೆ ನೀಡಿ ಆನಂತರ ನನ್ನನು ಗಲ್ಲಿಗೇರಿಸಿ ಎನ್ನುತ್ತಾನೆ. ಅವನ ಮಾತಿಗೆ ಜೈಲರ್ ನಿಬ್ಬೆರಗಾಗಿ ಏಕೆಂದು ಕೇಳುತ್ತಾನೆ, ಆಗ ಆತ ಹೇಳುತ್ತಾನೆ ನಾನು ಬಾಲ್ಯದಲ್ಲಿ ಪಕ್ಕದ ಮನೆಯಿಂದ ಕಳ್ಳತನ ಮಾಡಿ ವಸ್ತುಗಳನ್ನು ತಂದು ಕೊಡುತಿದ್ದೆ. ಆಗ ನನ್ನ ಅಮ್ಮ ನನ್ನ ಹುರುದುಂಬಿಸುತ್ತಿದ್ದಳು ಎಂದ. ಈ ಕತೆ ತೀರಾ ಹಳೆಯದು ಆದರೆ ಇದರಿಂದ ದೊರೆಯುವ ನೀತಿ ನವ ನವೀನವೆ. ಅಂದರೆ ಇಲ್ಲಿ ಅವನಿಗೆ ಅಂತಿಮವಾಗಿ ಜ್ಞಾನೋದಯವಾಯಿತು. ಅವನನ್ನ ತಿದ್ದುವಲ್ಲಿ ತಾಯಿ ಎಡವಿದ್ದಳು.



**ಶ್ರೀಮತಿ ಕವಿತಾ ಎಸ್. ವಿ**
**ಮಾರುತಿ ನಗರ,**
**ರಾಣೆಬೆನ್ನೂರು -581115**
**ಜಿಲ್ಲೆ -ಹಾವೇರಿ**

ಇಂದಿನ ಜನ ಸಮೂಹ ಅದೆಷ್ಟೋ ಸಿನಿಮಾಗಳು ಅದೆಷ್ಟೋ ವೆಬ್ ಸಿರೀಸ್ಗಳು ನೋಡಿದರೂ ಕೇಳಿದರೂ ಯಾವ ಸಕಾರಾತ್ಮಕ ಬದಲಾವಣೆಗಳೂ ಕಾಣ ಸಿಗುವುದಿಲ್ಲ. ತಂದೆ ತಾಯಿ ಇಬ್ಬರೂ ಸಂಸ್ಕಾರವಂತರಿದ್ದರೆ ಇಂತಹ ನಿದರ್ಶನಗಳು ಕಮ ವಿರಳ ಆದ-ರೆ ಮಗು ತಪ್ಪು ಮಾಡಿದಾಗ ಅದನ್ನು ತಿದ್ದಿ ಬುದ್ಧಿ ಹೇಳಬೇಕಾದದ್ದು ತಂದೆ ತಾಯಿಯರ ಕರ್ತವ್ಯ. ಅದು ನಯಮಾತುಳಿಂದಾದರೂ ಸರಿ ದಂಡಿಸಿಯಾದರೂ ಸರಿ. ಕೆಲವು ಘಟನೆಗಳಲ್ಲಿ ತಾಯಿ ತಂದೆ ಇಬ್ಬರೂ ಸಂಸ್ಕಾರ ಹೊಂದಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದ್ದರೂ ಮಕ್ಕಳು ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಅದು ಸಹವಾಸ ದೋಷ ಅಥವಾ ಪರಿಸರ ಎನ್ನಬಹುದು. ಒಟ್ಟಾರೆಯಾಗಿ ಒಬ್ಬ ಮನುಷ್ಯ ಪ್ರಾಮಾಣಿಕತೆಯ ಹಾದಿಯಲ್ಲಿ ನಡೆಯಬೇಕಾದರೆ ಬಹಳಷ್ಟು ಮೌಲ್ಯಗಳನ್ನು ಮೈಗೂಡಿಸಿಕೊಂಡಿರಬೇಕು..

ಪ್ರಾಮಾಣಿಕತೆ ದಾರಿಯಲ್ಲಿ ತೃಪ್ತಿ ಅತ್ಯವಶ್ಯ. ಅದನ್ನೇ ಗಾಂಧೀಜಿ ಅನುಸರಿಸಿದ್ದು. ಸತ್ಯ ಮತ್ತು ಅಹಿಂಸೆಯ ಸುಂದರ ಮತ್ತು ಸರಳ ಜೀವನ ಶೈಲಿ. ದೇಶದ ಪ್ರಗತಿಗಾಗಿ ತುಂಡುಡುಗೆಯುಟ್ಟು ಚರಕ ನೇಯುವುದರ ಮುಖಾಂತರ ಉದ್ಯೋಗದ ಮಹತ್ವವನ್ನು ಸಾರಿ ಸ್ವದೇಶಿ ಉತ್ಪನ್ನಗಳ ಬಳಕೆಗೆ ಒತ್ತು ನೀಡಿದರು.

ಇಂದು ವಿದೇಶಿ ವಸ್ತುಗಳ ಬಳಕೆ ಕಣಕಣದಲ್ಲಿ ಏಕೀಕರಣಗೊಂಡಿ-ದೆ. ಎಷ್ಟರ ಮಟ್ಟಿಗೆ ವಿದೇಶಿ ವಸ್ತುಗಳ ಬಳಕೆ ಮಾಡುತ್ತಿದ್ದೇವೆ ಅಂದರೆ ಅವುಗಳಿಲ್ಲದೆ ನಮಗೆ ಬದುಕೆ ಇಲ್ಲ ಎಂಬ ಹಂತ ತಲುಪಿದ್ದೇವೆ. ಚೀನಾದಿಂದ ಬರುವ ಸರಕುಗಳನ್ನು ಸಂಪೂರ್ಣ ನಿಷೇಧಿಸಿದರೂ ಭಾರತದಲ್ಲಿ ಬೀಡು ಬಿಟ್ಟ ವಿದೇಶಿ ಕಂಪನಿಗಳೇನೂ ಕೊರತೆಯಿಲ್ಲ. ವಿದೇಶಿ ವಸ್ತುಗಳು ಭಾರತದಲ್ಲಿ ಬಿಕರಿಯಾಗಿ ವಿದೇಶಿ ರಾಷ್ಟ್ರಗಳು ಶ್ರೀಮಂತ ರಾಷ್ಟ್ರಗಳಾಗಿವೆ. ನಮ್ಮ ದೇಶದ ಪ್ರತಿಭೆಗಳೂ ಸಹ ವಿದೇಶದಲ್ಲಿ ಮಾರಾಟ ಆಗುತ್ತಿವೆ ಅದಕ್ಕೆ ಕಾರಣ ಆರ್ಥಿಕತೆ ಇದ್ದರೂ ಅದಕೆ ಸಂಪೂರ್ಣ ಹೊಣೆ ಸಂಪೂರ್ಣ ಭಾರತೀಯರು.ಹೀಗಿರುವಾಗ ಗಾಂಧೀಜಿ ಯವರ ಸ್ವದೇಶಿ ಕನಸು ಹೇಗೆ ನನಸಾದೀತು?

ಗಾಂಧೀಜಿಯವ ಅವರ ಕನಸುಗಳಲ್ಲಿ ಒಂದನ್ನಾದರೂ ಈಡೇರಿಸಿದ್ದೇವೆಯೆ ಎಂಬ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಗ್ರಾಮ ನ[illegible]ರ್ಮಲ್ಯ ಮತ್ತು ರಸ್ತೆ ಸುಧಾರಣೆ, ಪಾನ ಮುಕ್ತ ಭಾರತ, ಸ್ತ್ರೀ ಸ್ವಾತಂತ್ರ್ಯಹೀಗೆಒಂದನ್ನಾದರೂಸಾಕಾರಗೊಳಿಸಿಕೊಂಡಿದ್ದೇವೆಯೆ? ಎಷ್ಟೊ ಗ್ರಾಮಗಳಲ್ಲಿ ಮೂಲ ಸೌಕರ್ಯಗಳೆ ಇಲ್ಲ. ಕುಡಿಯುವ ನೀರಿಗಾಗಿ ಅವರು ಪಡುವ ಯಾತನೆ ಅಷ್ಟಿಷ್ಟಲ್ಲ. ಟ್ಯಾಪ್ ಆನ್ ಮಾಡಿದಾಗ ನೀರಿಲ್ಲದಿದ್ದರೆ ಮನೆಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿ ಮಾಡುವ ನಾವುಗಳೆಲ್ಲ ದೇಶದಲ್ಲಿ ಈ ವಿಷಯಕ್ಕೆ ಒಂದು ದಿನವಾದರೂ ಅಲ್ಲೋಲ ಕಲ್ಲೋಲ ಸೃಷ್ಟಿ ಮಾಡಿದ್ದೀವಾ? ಇಲ್ಲ. ಒಬ್ಬ ಸ್ತ್ರೀ ಮಧ್ಯರಾತ್ರಿ ಹನ್ನೆರಡು ಗಂಟೆಗೆ ಎಲ್ಲಿ ಓಡಾಡುತ್ತಾಳೊ ಅಲ್ಲಿ ನಿಜವಾದ ಸ್ವಾತಂತ್ರ್ಯವಿದೆ ಎಂದು ನುಡಿದಿದ್ದರು ಗಾಂಧೀಜಿ. ಅದಾದರೂ ಈಡೇರಿದೆಯೆ? ಇಲ್ಲ. ಮಧ್ಯರಾತ್ರಿ ಹಾಗಿರಲಿ ಅವಳು ಹಾಡುಹಗಲೇ ಅತ್ಯಾಚಾರಕ್ಕೀಡಾಗುತ್ತಿರುವುದು ನಿಜಕ್ಕೂ ಅವಹೇಳನಕಾರಿ ಸಂಗತಿ. ನಮ್ಮ ಮನೆಯ ಹೆಣ್ಣು ಮಕ್ಕಳ ಬಗೆಗೆ ಕಾಳಜಿ ವಹಿಸುವ ನಾವೆಲ್ಲ ದೇಶದ ಹೆಣ್ಣುಮಕ್ಕಳ ಬಗೆಗೆ ಕಾಳಜಿ ವಹಿಸಿದ್ದೀವಾ? ಇಲ್ಲ. ಸ್ತ್ರೀ ಮತ್ತು ಪುರುಷರ ಮಾನವೆಂದರೆ ಬೇರೆ-ಬೇರೆ ಏನಾದರೂ ಇದೆಯೆ?

ಇನ್ನು 'ಪಾನ ಮುಕ್ತ ಭಾರತ' ಕೇಳಲು ಅದೆಷ್ಟು ಸೊಗಸಾಗಿದೆ. ಆದರೆ ಕುಡಿತದಿಂದಲೆ ಆರ್ಥಿಕ ಸ್ಥಿತಿ ಮೇಲ್ಮಟ್ಟಕ್ಕೆ ಬರುತ್ತದೆ ಎಂಬುದನ್ನು ಲಾಕ್ ಡೌನ್ ಸಮಯದಲ್ಲೆ ನಿರ್ಧಾರವಾಯಿತಲ್ಲ. ಅದೆಷ್ಟೊ ಸಂಸಾರಗಳು ಕುಡಿತದಿಂದ ಬೀದಿಗೆ ಬಂದರೂ ಸರ್ಕಾರ ಅದಕ್ಕೆ ಮತ್ತಷ್ಟು ಉತ್ತೇಜನ ನೀಡುತ್ತಿದ್ದು ಆ ಎಲ್ಲ ಸಂಸಾರಗಳು ಬೀದಿಗೆ ಬಂದರೂ ಚಿಂತೆಯಿಲ್ಲ ದೇಶ ಉದ್ಧಾರ ಆಗುತ್ತಿದೆ ಅಷ್ಟು ಸಾಕು ಎಂಬ ಧ[illegible]ರ್ಯ ಸರಕಾರಕ್ಕೆ ಬಂದಿದೆ. ಕುಡಿತದ ದಾಸನಿಗೆ ಹೆಂಡತಿಯ ಮಾಂಗಲ್ಯವಿದೆಯಲ್ಲ!

ಭ್ರಷ್ಟಾಚಾರ ಮುಕ್ತ ಭಾರತ ಕೂಡ ಅವರ ಕನಸು ಆದರೆ ನಿತ್ಯ ಭ್ರಷ್ಟತೆ ಹೆಚ್ಚುತ್ತಲೆ ಇವೆ. ನೀಟ್, ಸಿಇಟಿ, ಪೋಲೀಸ್, ನೆಟ್, ಸೆಟ್ ಹೀಗೆ ದೇಶದ ಅತ್ಯುನ್ನತ ಹುದ್ದೆಗಳ ಅರ್ಹತಾ ಪರೀಕ್ಷೆಯಲ್ಲೂ ಅಕ್ರಮ.ಕೆಲಸ ಪಡೆಯಲೂ ಹಣ ಕೊಡಬೇಕು, ಪೆನ್ಶನ್ ಪಡೆಯಲೂ ಹಳ್ಳಿಯಿಂದ ದಿಲ್ಲಿಯ ವರೆಗೂ ಕೈ ಬಿಸಿ ಮಾಡಬೇಕು.

ಹೀಗಿರುವ ಭವ್ಯ ಭಾರತದ ಗಾಂಧೀಜಿಯ ಕನಸು ಹೇಗೆ ನನಸಾದೀತು? ಈ ನಿಟ್ಟಿನಲ್ಲಿ ಪ್ರಜ್ಞಾವಂತ ಯುವ ಪೀಳಿಗೆ ಹೋರಾಟ ಆರಂಭಿಸಿದರೆ ಅವರಿಗೆ ಅತ್ಯಂತ ಕ್ರೂರವಾಗಿ ಶಿಕ್ಷಿಸಿದ ಜಂತರ್-ಮಂತರ್ ಘಟನೆ ನಮ್ಮೆಲ್ಲರೆದುರು ಈಗಲೂ ಕಣ್ ಕಟ್ಟಿದಂತಿದೆ. ಎಷ್ಟೆಲ್ಲ ಅವಿವೇಕಿತನ, ಕ್ರೂರತೆ ಎಲ್ಲವನ್ನೂ ಹೊಂದಿದ ಅರೆ ಪ್ರಜ್ಞಾವಂತ ಭಾರತೀಯರು, ಪ್ರಜ್ಞಾವಂತರೂ ಸೇರಿ ಆಚರಿಸುವ ಗಾಂಧೀ ಜಯಂತಿಗೆ ನಿಜವಾದ ಅರ್ಥ ಹುಡುಕುವ ಜರೂರಿದೆ.



# ಗಾಂಧಿ ಜಯಂತಿ ಅಂಗವಾಗಿ ವಿವಿಧ ವೃತ್ತ, ರಸ್ತೆಗಳ ಸ್ವಚ್ಛತೆ

**ಹಾವೇರಿ:** ಗಾಂಧಿ ಜಯಂತಿ ಅಂಗವಾಗಿ ಬುಧವಾರ ನಗರದ ವಿವಿಧ ರಸ್ತೆಗಳು ಹಾಗೂ ವೃತ್ತಗಳ ಸ್ವಚ್ಛತಾ ಕಾರ್ಯದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗಿಗಳಾಗಿ ಶ್ರಮದಾನ ಮಾಡಿದರು.

ಮಹಾನ್ ವ್ಯಕ್ತಿಗಳ ಪುತ್ಥಳಿಯ ಸುತ್ತಮುತ್ತ ಕಸ ಹಾಕದಂತೆ ಹಾಗೂ ನಗರ ಸ್ವಚ್ಛತೆ ಬಗ್ಗೆ ಕಾಳಜಿಸಬೇಕು. ಸುಂದರ ನಗರ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಸಾರ್ವಜನಿಕರಿಗೆ ಕರೆ ನೀಡಲಾಯಿತು.

ಎಲ್ಲ ಇಲಾಖೆಗಳ ಅಧಿಕಾರಿಗಳು ಹಾಗೂ ನೌಕರರು ಸೇರಿದಂತೆ ಒಂದು ಸಾವಿರಕ್ಕೂ ಅಧಿಕ ಅಧಿಕಾರಿ -ನೌಕರರು ತಂಡ ತಂಡವಾಗಿ ಇಂದಿನ ಶ್ರಮದಾನ ಕಾರ್ಯದಲ್ಲಿ ಪಾಲ್ಗೊಂಡು ಜೆ.ಎಚ್.ಪಟೇಲ್ ವೃತ್ತ, ವಿ.ಕೃ.ಗೋಕಾಕ ವೃತ್ತ, ಶ್ರೀ ಬಸವೇಶ್ವರ ವೃತ್ತ, ಸುಭಾಸ ವೃತ್ತ, ವಿ.ಕೃ. ಗೋಕಾಕ, ಜೆ.ಪಿ.ವೃತ್ತ, ಮಹಾತ್ಮಗಾಂಧಿ ವೃತ್ತ, ಮೈಲಾರ ಮಹದೇವಪ್ಪ ವೃತ್ತ, ಹೊಸಮನಿ ಸಿದ್ದಪ್ಪ ವೃತ್ತ, ಕಿತ್ತೂರ ಚನ್ನಮ್ಮ ವೃತ್ತ, ಮಹರ್ಷಿ ವಾಲ್ಮೀಕಿ ವೃತ್ತ, ನಗರದ ಪ್ರಮುಖ ಬೀದಿಗಳ ಸ್ವಚ್ಛತೆ ಕಾರ್ಯ ನೆರವೇರಿಸಿದರು.

ತಹಶೀಲ್ದಾರ ಶರಣಮ್ಮ, ನಗರಸಭೆ ಪೌರಾಯುಕ್ತ ಕಾಂತರಾಜು, ಚುನಾವಣಾ ತಹಶೀಲ್ದಾರ ಅಮೃತಗೌಡ ಪಾಟೀಲ, ಜಿಲ್ಲಾಧಿಕಾರಿಗಳ ಕಚೇರಿ, ತಹಶೀಲ್ದಾರ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪಶು ಸಂಗೋಪನೆ ಇಲಾಖೆ, ಕಂದಾಯ ಇಲಾಖೆ, ಅಬಕಾರಿ, ಅಗ್ನಿಶಾಮಕ, ಪ್ರಾದೇಶಿಕ ಸಾರಿಗೆ ಇಲಾಖೆ, ಸೇರಿದಂತೆ ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ ಶ್ರಮದಾನದ ಮೂಲಕ ನಗರ ಸ್ವಚ್ಛತೆ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.




# ಆಸ್ಪತ್ರೆ ಹಾಗೂ ಕ್ಯಾಂಟಿನ್‌ಗೆ ಜಿಲ್ಲಾಧಿಕಾರಿ ಭೇಟಿ, ಸ್ವಚ್ಛತೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ

**ಹಾವೇರಿ:** ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಕ್ಯಾಂಟಿನ್‌ನಲ್ಲಿ ತಯಾರಿಸಲಾದ ಉಪಹಾರದಲ್ಲಿ ಸತ್ತ ಹಲ್ಲಿ ಪತ್ತೆಯಾದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಮಂಗಳವಾರ ಕ್ಯಾಂಟಿನ್ ಹಾಗೂ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕ್ಯಾಂಟಿನ್‌ಲ್ಲಿ ಆಹಾರ ತಯಾರಿಸುವಾಗ ಶುಚಿತ್ವ ಹಾಗೂ ರುಚಿಗೆ ಆದ್ಯತೆ ನೀಡಬೇಕು. ರೋಗಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ಜಾಗ್ರತೆ ವಹಿಸಬೇಕು. ಗುಣಮಟ್ಟದ ಆಹಾರ ಪದಾರ್ಥಗಳನ್ನು ಬಳಸಬೇಕು ಎಂದು ಸೂಚನೆ ನೀಡಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ತೆರಳಿ ಪರಿಶೀಲನೆ ನಡೆಸಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದರೊಂದಿಗೆ ಶುದ್ಧ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿದ ಅವರು, ಆಸ್ಪತ್ರೆಗೆ ಬರುವ ಪ್ರತಿ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಪಿ.ಆರ್. ಹಾವನೂರ ಸೇರಿದಂತೆ ವಿವಿಧ ವೈದ್ಯರು ಹಾಜರಿದ್ದರು.



# ದೌರ್ಜನ್ಯ ಪ್ರಕರಣಗಳ ತಡೆಗೆ ಅಗತ್ಯ ಜಾಗೃತಿ ಮೂಡಿಸಿ: -ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ

**ಹಾವೇರಿ:** ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಡಗಳ ದೌರ್ಜನ್ಯ ಪ್ರಕರಣಗಳ ತಡೆಗೆ ಗ್ರಾಮ ಮಟ್ಟದಿಂದಲೇ ಅಗತ್ಯ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಜನರ ಮೇಲಿನ ದೌರ್ಜನ್ಯ ನಿಯಂತ್ರಣ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೌರ್ಜನ್ಯ ಪ್ರಕರಣಗಳು ಹೆಚ್ಚಾಗಲು ಕಾರಣ ಏನು ಎಂದು ತಿಳಿದುಕೊಳ್ಳಬೇಕು ಹಾಗೂ ಪ್ರಕರಣಗಳ ತಡೆಗೆ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸುವುದು ಅವಶ್ಯವಾಗಿದೆ ಎಂದರು.

ದೌರ್ಜನ್ಯ ಪ್ರಕರಣಗಳು ಕಂಡು ಬಂದಾಗ ನಾಮನಿರ್ದೇಶಿತ ಸದಸ್ಯರ ಗಮನಕ್ಕೆ ತರಬೇಕು. ಪ್ರಕರಣದ ವಾಸ್ತವಸ್ಥಿತಿ ತಿಳಿದುಕೊಳ್ಳಬೇಕು. ಸಣ್ಣ-ಪುಟ್ಟ ವಿಷಯಗಳಿಗೆ ಪ್ರಕರಣಗಳು ನಡೆದಂತೆ ನೋಡಿಕೊಳ್ಳಬೇಕು ಎಂದರು.

ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯ ಶಿವರಾಜ ಹರಿಜನ ಹಾಗೂ ಬಸವರಾಜ ಹೆಡಿಗ್ಗೊಂಡ ಅವರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕಾಲೋನಿಯಲ್ಲಿ ಜಾಗೃತಿ ಮೂಡಿಸಬೇಕು. ಮೊದಲು ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಭೆ ಮಾಡಿ ಹಾಗೂ ಗ್ರಾಮ ಪಂಚಾಯತಿಗಳಿಗೆ ಕರ ಪತ್ರ ಹಂಚುವ ಕೆಲಸವಾಗಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಗ್ರಾಮ ಸೇರಿದಂತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗದವರು ಇತರೆ ವರ್ಗದವರು ಸೌಹಾರ್ದತೆ, ಅನ್ಯೋನ್ಯತೆ,ಪ್ರೀತಿ, ವಿಶ್ವಾಸದಿಂದ ಇರುವಂತೆ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ. ದೌರ್ಜನ್ಯ ಪ್ರಕರಣಗಳು ಕಡಿಮೆಯಾಗಬೇಕು, ಅಂದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಸದಸ್ಯ ಶಿವರಾಜ ಹರಿಜನ ತಿಳಿಸಿದರು.

ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರು ಜೆ.ಜೆ.ಎಂ. ಕಳಪೆ ಕಾಮಗಾರಿ ಪರಿಶೀಲಿಸುವಂತೆ ಹಾಗೂ ವಿವಿಧ ಗ್ರಾಮಗಳಲ್ಲಿ ನೀರು ಸಹ ಬರುತ್ತಿಲ್ಲ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಮೂರು ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಶೇ. 90 ರಷ್ಟು ಕಾಮಗಾರಿ ಆಗಿದ್ದು, ಕೊನೆಯ ಹಂತದ ಕೆಲಸ ಬಾಕಿ ಇದೆ. ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು, ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರುವ ಕೊಡುವ ಕಾರ್ಯಮಾಡಲಾಗುವುದು. ಬರುವ ದಿನಗಳಲ್ಲಿ ಸರಿಯಾಗಿ ನೀರು ಪೂರೈಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ ಅವರು ಮಾತನಾಡಿ, ಏಪ್ರಿಲ್ -2026 ರಿಂದ ಸೆಪ್ಟೆಂಬರ್ ಮಾಹೆವರೆಗೆ 62 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 52 ನೈಜ ಪ್ರಕರಣಗಳಾಗಿದ್ದು, 10 ಸುಳ್ಳು ಪ್ರಕಣಗಳಾಗಿವೆ. ಜುಲೈ ಮಾಹೆಯಿಂದ ಸೆಪ್ಟೆಂಬರ್ ಮಾಹೆವರೆಗೆ 20 ಪ್ರಕರಣಗಳ ಸಂತ್ರಸ್ಥರಿಗೆ ರೂ.29,12,500 ಪರಿಹಾರ ಮಂಜೂರ ಮಾಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿಜಿಲ್ಲಾಪೊಲೀಸ್‌ವರಿಷ್ಠಾಧಿಕಾರಿಶ್ರೀಮತಿಯಶೋಧಾ ವಂಟಗೋಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್ಜಿತಕುಮಾರ, ಸವಣೂರ ಉಪ ವಿಭಾಗಾಧಿಕಾರಿ ಪ್ರಕಾಶ ಖೋಡೆ, ಜಿ.ಪಂ.ಉಪ ಕಾರ್ಯದರ್ಶಿ ಡಾ.ಪುನಿತ್, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಡಿಎಸ್‌ಪಿ ರಮೇಶಕುಮಾರ, ಜಿಲ್ಲಾ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಸರೋಜಾ ಕೂಡಲಮಠ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರಗಳು, ಸ್ಥಳೀಯ ನಗರ ಸಂಸ್ಥೆಗಳ ಮುಖ್ಯಾಧಿಕಾರಿಗಳು, ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರಾದ ಸಂಜಯಗಾಂಧಿ ಸಂಜೀವಣ್ಣನವರ, ಎನ್.ಎಂ.ಗಾಳೆಮ್ಮನವರ, ರಮೇಶ ಕೊರವರ, ಜಗದೀಶ ಹರಿಜನ, ಅಜ್ಜಪ್ಪ ಗೋಣೆಮ್ಮನವರ, ಯಲ್ಲಪ್ಪ ದೇವಗಿರಿ ಇತರರು ಉಪಸ್ಥಿತರಿದ್ದರು.

# ಅ.1ರಂದು ಕ್ಯಾಂಪಸ್ ನೇಮಕಾತಿ ಡ್ರೈವ್

**ಹುಬ್ಬಳ್ಳಿ:** ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಗೋವಾದ ಮೆ. ಫೋಯಿಬಸ್ ಲಿಮಿಟೆಡ್ ಸಂಸ್ಥೆಯ ಸಹಯೋಗದೊಂದಿಗೆ ಕ್ಯಾಂಪಸ್ ನೇಮಕಾತಿ ಡ್ರೈವ್ ನ್ನು ಅಕ್ಟೋಬರ್ 1 ರಂದು ಬೆಳಿಗ್ಗೆ 10.30 ಕ್ಕೆ ವಿದ್ಯಾನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಫಿಟ್ಟರ್, ಮಶಿನೀಸ್ಟ್, ಟರ್ನರ್ ಮತ್ತು ಅಡ್ವಾನ್ಸ್ಡ್ ಸಿಎನ್‌ಸಿ ಮಷೀನಿಂಗ್ ಟೆಕ್ನಿಷಿಯನ್ ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ಟೈಪೆಂಡ್, ಸಾರಿಗೆ ಸೌಲಭ್ಯ, ವಸತಿ ಸೌಲಭ್ಯ, ಪ್ರೋತ್ಸಾಹಧನ, ಇ.ಎಸ್.ಐ, ಪಿ.ಎಫ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುವುದು. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಕ್ಯಾಂಪಸ್ ಡ್ರೈವ್ ಗೆ ತಮ್ಮ ಮೂಲ ಪ್ರಮಾಣಪತ್ರಗಳು, ರೆಸ್ಯೂಮ್ ಮತ್ತು ಫೋಟೊಗಳೊಂದಿಗೆ ಹಾಜರಾಗುವಂತೆ ವಿದ್ಯಾನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114